# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ ಜುಲೈ 1-31 2017**

KANNADA MONTHLY JULY 1-31 2017

ಸಂಪುಟ 2, ಸಂಚಿಕೆ 11 ಪುಟ : 24, ಬೆಲೆ : ರೂ. 5–00

Vol. 2, Issue 11, Pages: 24, Price : Rs. 5-00

ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444




**ಒಳಪುಟಗಳಲ್ಲಿ...**


| | |
|---|---|
| ಸ್ತ್ರೀಶಕ್ತಿಯನ್ನು ತೋರಿಸುವಿರಾ | Pg. No. 3 |
| ಇನ್ನೂ ಕೆಲಸ ಸಿಕ್ಕಿಲ್ಲವೇ | Pg. No. 6 |
| ಕೋಳಿಹಿಕ್ಕೆಯಿಂದ ವಿದ್ಯುತ್ | Pg. No. 8 |
| ಸ್ನೇಹ | Pg. No. 18 |
| ಅನಸೂಯ ಯಾಗ | Pg. No. 21 |


**ನಾಡಿನ ಜನತೆಗೆ ಪತ್ರಿಕಾ ದಿನಾಚರಣೆ ಹಾಗೂ ವೈದ್ಯರ ದಿನಾಚರಣೆ, ಜಿಎಸ್‌ಟಿ ಆರಂಭದ ದಿನಕ್ಕೆ ಶುಭಾಶಯಗಳು**









B-Soft Infotech

No. 2352, 4th Cross, 6th Main

Vinayakanagara, Mysore 570 012

Contact No. 0821-4195190, 88677-74447

## ನನ್ನ ಮಾತು
## ಸ್ತ್ರೀಶಕ್ತಿಯನ್ನು ತೋರಿಸುವಿರಾ?



ಇದೇ ತಿಂಗಳು ನಡೆಯುವ ಭಾರತದ ರಾಷ್ಟ್ರಪತಿಗಳ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯಾಗಿ ಶ್ರೀ ರಾಮನಾಥ ಕೋವಿಂದ್ ಹಾಗೂ ಯುಪಿಎ ಅಭ್ಯರ್ಥಿಯಾಗಿ ಶ್ರೀಮತಿ ಮೀರಾ ಕುಮಾರ್‌ರವರು ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ರಾಜಕೀಯ ಜನಸಾಮಾನ್ಯರಿಗೆ ಕಬ್ಬಿಣದ ಕಡಲೆ. ಆದರೆ ರಾಜಕಾರಣಿಗಳಿಗೆ ಹಾಗಲ್ಲ. ನಾಮಪತ್ರ ಸಲ್ಲಿಸುವವರಲ್ಲಿ ಒಬ್ಬರು ಪುರುಷರು ಮತ್ತು ಮತ್ತೊಬ್ಬರು ಸ್ತ್ರೀ ಪ್ರಭಾವಿ ವ್ಯಕ್ತಿಗಳಾಗಿ ಸ್ಪರ್ಧಿಸಿರುವುದು ಸಂತಸದ ವಿಷಯ. ಈ ಚುನಾವಣೆಯಲ್ಲಿ ಗೆಲ್ಲುವುದು ಒಬ್ಬರೇ. ಆದಾಗ್ಯೂ ಚುನಾವಣೆ ನಡೆಸದೆ ರಾಷ್ಟ್ರಪತಿಯನ್ನು ಆಯ್ಕೆ ಮಾಡಬಹುದಾಗಿತ್ತು. ಆದರೆ ಇಲ್ಲಿ ಪಕ್ಷಗಳು ಒಂದಾಗಲಿಲ್ಲವಾದ್ದರಿಂದ ಚುನಾವಣೆ ನಡೆಯಬೇಕಾಗಿದೆ.

ಒಂದು ಮನೆಯನ್ನು ತಂದೆ ಅಥವಾ ತಾಯಿ ಮುನ್ನಡೆಸುವಂತೆ ಈಗ ದೇಶವನ್ನು ಪ್ರತಿನಿಧಿಸುವವರು ಅಪ್ಪನೋ ಅಥವಾ ಅಮ್ಮನೋ ಎಂದು ಚುನಾವಣೆಯಿಂದ ನಿರ್ಧಾರವಾಗಲಿದೆ. ಸಮಾಜದಲ್ಲಿ ಮಹಿಳೆ ಸಮರ್ಥಳಿದ್ದಾಳೆ. ಭಾರತಮಾತೆ ಎನ್ನುತ್ತೇವೆ. ಅದಕ್ಕೆ ಮಹಿಳೆಯೇ ಸೂಕ್ತ. ಮಹಿಳೆಯನ್ನು ಸೋಲಿಸಬೇಡಿ. ಸೋತರೆ ಅವಮಾನ ಜನಸಾಮಾನ್ಯ ಮಹಿಳೆಯರಿಗೆ. ಶತಾಯ ಗತಾಯ ಯುಪಿಎ ಗೆಲುವಿನ ದಡ ಸೇರಿಸಿ ಸ್ತ್ರೀಶಕ್ತಿಗೆ ಬಲ ತುಂಬಿ ಎಂಬುದೇ ಮಹಿಳೆಯರ ಆಶಯ.

*ಸಂಪಾದಕ*
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ

**ಮಹಿಳಾ ವಿಶೇಷ**
MAHILA VISHESHA
**ಕನ್ನಡ ತಿಂಗಳ ಪತ್ರಿಕೆ**

**ಜುಲೈ, 1-31 2017**

KANNADA MONTHLY

JULY 1-31, 2017

ಸಂಪುಟ 2, ಸಂಚಿಕೆ 11, ಪುಟ: 24

Price/ಬೆಲೆ : ರೂ. 5-00

Vol. 2, Issue 11, Pages: 24

ಮುಖಪುಟ:
**ಕೊಲ್ಲೂರು ಮೂಕಾಂಬಿಕಾ ದೇವಿ**

ಗೌರವ ಸಂಪಾದಕರು:
**ಶ್ರೀಮತಿ ಸತ್ಯಭಾಮಾ ದಾಸ್**
**ಶ್ರೀಮತಿ ಗೀತಾ ರಾವ್**

ಸಂಪಾದಕರು:
**ಹೆಚ್.ವಿ. ವೆಂಕಟಸುಬ್ಬರಾವ್**
ಮೊಬೈಲ್ 88803-34444

ಉಪಸಂಪಾದಕರು:
**ಎಸ್.ವೆಂಕಟರವಣಪ್ಪ**
**ಸಾವಿತ್ರಿ ಎಂ.ಸಿ.**

ಕಛೇರಿ ವಿಳಾಸ:
ನಂ. 612, ಕೇರಾಫ್ ಮೆಟ್ರೋ ಟೈಲರ್ಸ್, ನಾರಾಯಣಶಾಸ್ತ್ರಿ ರಸ್ತೆ, ಶಾಂತಲಾ ಸಿಗ್ನಲ್ ಲೈಟ್ ಹತ್ತಿರ, ಕೆ.ಆರ್. ಮೊಹಲ್ಲಾ, ಮೈಸೂರು-24.
E-mail: mahilavishesha@yahoo.com
Web: www.mahilavishesha.in





# ಕಂಚುಕದಿಂದ ಬ್ರಾವರೆಗಿನ ಮಜಲುಗಳು

## ಬದಲಾದ ಚೋಲಿ

ಭಾರತದಲ್ಲಿ 15ನೇ ಶತಮಾನದ ಅಂತ್ಯದ ವೇಳೆಗೆ ಮೊಘಲರ ಆಳ್ವಿಕೆ ಪ್ರಾರಂಭವಾಗಿತ್ತು. ಕೇವಲ ಕಂಚುಕದಂತಹ ಚೋಲಿ ಧರಿಸುತ್ತಿದ್ದ ಮಹಿಳೆಯರ ಗಮನವು ಕುರ್ತಾ, ಕಮೀಜ್, ದುಪ್ಪಟ್ಟಾಗಳತ್ತ ಹರಿಯಿತು. ಈ ಉಡುಪುಗಳು ಆ ಚೋಲಿಯನ್ನು ಸಂಪೂರ್ಣವಾಗಿ ಮರೆಮಾಡಿದವು.

1560ನೇ ಇಸವಿಯಲ್ಲಿ ಫ್ರಾನ್ಸ್‌ನಲ್ಲಿ ಲೋಹದ ಬ್ರಾನ ಪದ್ಧತಿ ಇತ್ತು. ಆದ್ದರಿಂದ ಅನೇಕ ತೊಂದರೆಗಳಾಗುತ್ತಿದ್ದವು. ಅದನ್ನರಿತಿದ್ದ ಕ್ಯಾಥರೀನ್ ಡಿ ಮೆಡೀಕಿ ಎಂಬ ಅಲ್ಲಿನ ರಾಣಿಯು ಮುಂದಿನ 350 ವರ್ಷಗಳವರೆಗೆ ಸ್ಟೀಲ್ ಬ್ರಾಗೆ ನಿಷೇಧ ಹೇರಿದಳು.

19ನೇ ಶತಮಾನದವರೆಗೆ ಭಾರತದಲ್ಲಿ ಮಹಿಳೆಯರು ಮನೆಯಲ್ಲೇ ಸಿದ್ಧಪಡಿಸಿದ ಚೋಲಿಯನ್ನು ಧರಿಸುತ್ತಿದ್ದರು. ಅದರಲ್ಲಿ ದಾರಗಳಿಗೆ ಬದಲಾಗಿ ಅಗಲವಾದ ಪಟ್ಟಿ ಅಥವಾ ಬಟ್ಟೆಯನ್ನು ಬಳಸಲಾಗುತ್ತಿತ್ತು.

1850-1870ರಲ್ಲಿ ಅಮೆರಿಕಾದ ಬೋಸ್ಟನ್ ರಾಜ್ಯದಲ್ಲಿ ಕೆಲವು ಮಹಿಳೆಯರು ಬ್ರಾ ಧರಿಸಲು ಒಪ್ಪುತ್ತಿರಲಿಲ್ಲ.

1913ರಲ್ಲಿ ನ್ಯೂಯಾರ್ಕ್‌ನ ಮೇರಿ ಫಿಲಿಪ್ ಜೇಕಬ್ ಎಂಬುವಳು ತನ್ನ ನೌಕರಳಿಗಾಗಿ ಎರಡು ಕರವಸ್ತ್ರಗಳನ್ನು ಸೇರಿಸಿ, ಅದಕ್ಕೆ ಪಟ್ಟಿ ಅಳವಡಿಸಿ ಬ್ರಾ ಸಿದ್ಧಪಡಿಸಿದ್ದಳು. ಅದು ಎಲ್ಲರ ಮೆಚ್ಚುಗೆ ಗಳಿಸಿತ್ತು.

1914ರಲ್ಲಿ ಜೇಕಬ್ ಒಂದು ಬ್ಯಾಕ್‌ಲೆಸ್ ಬ್ರಾವನ್ನು ಕೇರ್ ಸೀ ಎಂಬ ಹೆಸರಿನಿಂದ ಪೇಟೆಂಟ್ ಮಾಡಿಸಿದಳು. ನಂತರ ಅವಳು ತನ್ನ ಪೇಟೆಂಟ್‌ನ್ನು ಬ್ರಾ ತಯಾರಿಸುವ ಒಂದು ದೊಡ್ಡ ಕಂಪನಿಯಾದ ವಾರ್ನರ್ ಬ್ರದರ್ಸ್‌ಗೆ ಮಾರಿದಳು. ಆ ಕಂಪನಿಯು ನಂತರದ 80 ವರ್ಷಗಳಲ್ಲಿ ಕೇವಲ ಬ್ರಾ ಮಾರಾಟದ ಮೂಲಕ 1 ಕೋಟಿ 50 ಲಕ್ಷ ಡಾಲರ್‌ಗಳನ್ನು ಸಂಪಾದಿಸಿತು.

1914-1918ರಲ್ಲಿ ಮೊದಲ ವಿಶ್ವ ಮಹಾಯುದ್ಧ ನಡೆಯಿತು. ಮಹಿಳೆಯರು ಲೋಹದ ಬ್ರಾ ಧರಿಸುತ್ತಿದ್ದ ಕಾಲವದು. 1917ರಲ್ಲಿ ಅಮೆರಿಕಾದ ಯುದ್ಧ ಮಂಡಲಿಯು ಮಹಿಳೆಯರ ಲೋಹದ ಬ್ರಾ ಬಳಕೆಗೆ ತಡೆ ಹಾಕಿತು. ಎಲ್ಲ ಬ್ರಾಗಳ ಲೋಹವನ್ನು ಒಟ್ಟಿಗೆ ಕಲೆ ಹಾಕಿದಾಗ, ಅಷ್ಟು ದೊಡ್ಡ ಪ್ರಮಾಣದ (28,000 ಟನ್) ಲೋಹದಿಂದ 2 ಯುದ್ಧನೌಕೆಗಳನ್ನು ತಯಾರು ಮಾಡಬಹುದೆಂದು ಅಂದಾಜು ಮಾಡಲಾಯಿತು.

1936ರಲ್ಲಿ ಸಿದ್ಧಪಡಿಸಲಾದ ಪ್ರಥಮ ಚೋಲಿಯನ್ನು ಬ್ರೆಜರಿ ಎಂದು ಕರೆಯಲಾಗಿತ್ತು. ನಂತರ ಅದಕ್ಕೆ ಬ್ರಾ ಎಂಬ ಹೆಸರು ಕೊಡಲ್ಪಟ್ಟಿತು.

1950ರಲ್ಲಿ ಫ್ಯಾಷನೆಬಲ್ ವಿಧಾನದಲ್ಲಿ ಇಂದು ಮಾರುಕಟ್ಟೆಯಲ್ಲಿ ದೊರೆಯುವಂತಹುದೇ ರೀತಿಯಲ್ಲಿ ಸುಂದರ ಆಕಾರ ಕೊಟ್ಟು, ಪ್ರಥಮ ಬಾರಿಗೆ ಬ್ರಾವನ್ನು ಸಿದ್ಧಪಡಿಸಲಾಯಿತು.

1952ರಲ್ಲಿ ಮೊಟದಲ ಬಾರಿಗೆ ಪ್ಯಾಡೆಡ್ ಬ್ರಾವನ್ನು ತಯಾರು ಮಾಡಲಾಯಿತು.

ಅದನ್ನು ಗುಪ್ತ ಬ್ರಾ ಎಂದೂ ಕರೆಯಲಾಗುತ್ತಿತ್ತು. ಚಿಕ್ಕ ಸ್ತನವುಳ್ಳ ಮಹಿಳೆಯರಿಗಾಗಿ ಇದನ್ನು ತಯಾರಿಸಲಾಗಿತ್ತು. ಈ ಬ್ರಾದಿಂದ ವಕ್ಷದ ಆಕಾರ ದೊಡ್ಡದಾಗಿರುವಂತೆ ಕಾಣಿಸುತ್ತದೆ.

1968ರಲ್ಲಿ ಭಾರತದಲ್ಲಿ ಚರ್ಮದ ಬಾಟಲ್‌ನ ಆಕಾರದಲ್ಲಿ ದಪ್ಪ ಬಟ್ಟೆಯಿಂದ ಮಾಡಿದ ಗಟ್ಟಿಯಾದ ಬ್ರಾ ಬಳಕೆಗೆ ಬಂದಿತು. ಈ ಬ್ರಾದಲ್ಲಿ ಭುಜದ ಪಟ್ಟಿಯನ್ನು ಬಟ್ಟೆಯಿಂದಲೇ ಹೊಲಿದಿರಲಾಗುತ್ತಿತ್ತು.

1987ರಲ್ಲಿ ಮೆಡೋನಾ, ಇಂತಹ ಚರ್ಮದ ಬಾಟಲ್‌ನ ಆಕಾರದ ಬ್ರಾ ಮತ್ತು ಟಾಪ್ ಧರಿಸಿ ಜನರ ಮುಂದೆ ಬಂದು ನಿಂತಳು. ಅಂದಿನಿಂದ ಆ ಆಕಾರವು ಹಿಟ್ ಆಯಿತು.

1987ರ ನಂತರಲ್ಲಿ ಬ್ರಾನ ಬಟ್ಟೆಯಲ್ಲಿ ವೈವಿಧ್ಯತೆ ಕಂಡುಬಂದಿತು. ಕಾಟನ್, ನೈಲಾನ್, ನೆಟೆಡ್ ಬ್ರಾಗಳು, ಸ್ತನ್ಯಪಾನ ಮಾಡಿಸುವ ತಾಯಂದಿರಿಗಾಗಿ ವಿಶೇಷ ಬ್ರಾ, ಸ್ಟ್ರಾಪ್‌ಲೆಸ್ ಬ್ರಾ, ತೆಳುವಾದ ಬಾರ್, ಎಲಾಸ್ಟಿಕ್ ಬ್ರಾ, ದಾರಗಳುಳ್ಳ ಬ್ರಾ ಮುಂತಾದ ಎಲ್ಲ ಬಣ್ಣಗಳ ಬ್ರಾಗಳು ಫ್ಯಾಷನ್ ಆಗಿವೆ. ಭುಜದ ಪಟ್ಟಿಯ ಡಿಸೈನ ಸಹ ಈಗ ಬದಲಾಗಿದೆ.

ಇಂದು ಯಾವುದೇ ಪ್ರಸಿದ್ಧ ಬ್ರಾಂಡ್‌ನ ಬ್ರಾ ಅದರ ಮ್ಯಾಚಿಂಗ್ ಪ್ಯಾಂಟಿಯೊಡನೆ ದೊರೆಯುತ್ತದೆ ಮತ್ತು ಅದು ಇಂದಿನ ಫ್ಯಾಷನ್ ಆಗಿದೆ. ಆದರೆ ಇಂದೂ ಸಹ ಗುಜರಾತ್ ಮತ್ತು ರಾಜಾಸ್ಥಾನದ ಲಂಬಾಣಿ ಮಹಿಳೆಯರು ಸಾಂಪ್ರದಾಯಿಕವಾದ ಚೋಲಿ ಮತ್ತು ಏಪ್ರನ್‌ಗಳಲ್ಲಿ ಕಾಣಸಿಗುತ್ತಾರೆ.

ಶಾಲಿನಿ

## ಅರಮನೆಯಲ್ಲಿ ವಸ್ತುಪ್ರದರ್ಶನಕ್ಕೆ ಮನವಿ

ಮೈಸೂರು ಸಂಸ್ಥಾನದ ಕೀರ್ತಿಯನ್ನು ಪ್ರಪಂಚದಲ್ಲೇ ತಂದಂತಹ ಯದುವಂಶದ ರಾಜರ ಚರಿತ್ರೆಯು ಚಿರಸ್ಥಾಯಿಯಾಗಿದೆ. ಪ್ರಜೆಗಳ ರಕ್ಷಣೆ ರಕ್ಷಿಸಿದ್ದು, ಅಂದು ಬಹಳ ಮುಖ್ಯವಾಗಿತ್ತು. ಆದುದರಿಂದ ಯದುವಂಶದ ಎಲ್ಲ ರಾಜರ ಸುಂದರವಾದ ತೈಲಚಿತ್ರವನ್ನು ತಯಾರಿಸಿ ಅವರವರ ಪ್ರತಿಭೆ ಹಾಗೂ ಸಾಧನೆಗಳನ್ನು ಚಾಮುಂಡಿ ಬೆಟ್ಟದ ಅರಮನೆ ಹಾಗೂ ಬೆಂಗಳೂರಿನ ಅರಮನೆಯಲ್ಲಿ ಪ್ರದರ್ಶಿಸಿದರೆ, ತಮ್ಮ ಕೀರ್ತಿಯೂ ಸಹ ಶಾಶ್ವತವಾಗಿ ಉಳಿಯುತ್ತದೆಂದು ಮೈಸೂರಿನ ಹಿರಿಯ ವಕೀಲ ಹಾಗೂ ಮಾಜಿ ಶಾಸಕರಾದ ಶ್ರೀ ಹೆಚ್. ಗಂಗಾಧರ್ ಅವರು ರಾಜಮಾತೆ ಶ್ರೀಮತಿ ಪ್ರಮೋದಾ ದೇವಿಯವರಿಗೆ ವಿನಂತಿಸಿಕೊಂಡಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

★ ★ ★

## ಒಂದು ದೇಶ ಒಂದು ತೆರಿಗೆ

ಇಂದಿನಿಂದ ಒಂದು ದೇಶ, ಒಂದು ತೆರಿಗೆ ಜಿಎಸ್‌ಟಿ ಕಾರ್ಯರೂಪಕ್ಕೆ ಬಂದಿದೆ. ರಾಷ್ಟ್ರಾಧ್ಯಕ್ಷರು, ಪ್ರಧಾನಮಂತ್ರಿಗಳು, ಇತರ ಗಣ್ಯವ್ಯಕ್ತಿಗಳು ಈ ಕಾಯ್ದೆಯನ್ನು ದೇಶಕ್ಕೆ ಇಂದಿನಿಂದ ಸಮರ್ಪಿಸಿದ್ದು, ಜನಸಾಮಾನ್ಯರಿಗೆ ಸಹಾಯವಾಗುವ ನಿಟ್ಟಿನಲ್ಲಿ ಈ ಕಾಯ್ದೆಗಳು ಹೊಂದಿಕೊಂಡರೆ ಅಷ್ಟೇ ನಮ್ಮ ಜನರಿಗೆ ಸಂತಸ.





## ಇನ್ನೂ ಕೆಲಸ ಸಿಕ್ಕಿಲ್ವಾ...?

ಪದವಿ ಅಂಕಪಟ್ಟಿಯಲ್ಲಿ ಉತ್ತಮ ಅಂಕಗಳು ಬಂದರೂ ಅವುಗಳ ಆಧಾರದಲ್ಲಿ ಕೆಲಸ ಮಾತ್ರ ಸಿಕ್ಕುವುದಿಲ್ಲ. ಇದಕ್ಕೆ ಕಾರಣ–ಪದವಿಗೂ ಕೆಲಸಕ್ಕೂ ನಡುವೆ ಇರುವ ಕಂದಕ.

ಈಚೆಗೆ ಬಹುರಾಷ್ಟ್ರೀಯ ಕಂಪನಿಯೊಂದು ಕೆಮಿಸ್ಟ್ರಿ ಮತ್ತು ಆರ್ಗ್ಯಾನಿಕ್ ಕೆಮಿಸ್ಟ್ರಿ ಸ್ನಾತಕೋತ್ತರ ಪದವೀಧರರಿಗೆ ಕ್ಯಾಂಪಸ್ ಸಂದರ್ಶನ ನಡೆಸುವುದಾಗಿ ಮುಂದೆ ಬಂತು. ಅವರ ಆಯ್ಕೆ ಪ್ರಕ್ರಿಯೆಯು ಎರಡು ಹಂತದಲ್ಲಿ, ಅಂದರೆ ವಿದ್ಯಾರ್ಥಿಯ ಕ್ಯಾಂಪಸ್‌ನಲ್ಲೂ, ಅಂತಿಮ ಹಂತ ಕಂಪನಿಯಲ್ಲೂ ಆಗುವುದಿತ್ತು. ಮೊದಲ ಹಂತದಲ್ಲಿ ಮೊದಲಿನದು ಲಿಖಿತ ಪರೀಕ್ಷೆ. ಅದರಲ್ಲಿ ಪಾಸಾದವರಿಗೆ ಸಂದರ್ಶನ. ಲಿಖಿತ ಪರೀಕ್ಷೆ ಅಭ್ಯರ್ಥಿಗಳು ಓದಿದ ಸ್ನಾತಕೋತ್ತರ ವಿಷಯದಲ್ಲಷ್ಟೇ ಇರುತ್ತದೆ ಎಂದು ನಾವು ಭಾವಿಸಿದ್ದೆವು. ಅವರ ಪ್ರಶ್ನೆಪತ್ರಿಕೆಗಳನ್ನು ತೆರೆದು ನೋಡಿದಾಗ ಅರಿವಿಗೆ ಬಂತು–ಶೇಕಡಾ 50ರಷ್ಟು ಪ್ರಶ್ನೆಗಳು ಮಾತ್ರ ಅಭ್ಯರ್ಥಿಗಳಲು ಓದುತ್ತಿರುವ ಕೆಮಿಸ್ಟ್ರಿಯದಾಗಿತ್ತು. ಇನ್ನು ಶೇಕಡಾ 50ರಷ್ಟು ಪ್ರಶ್ನೆಗಳು ಅಭ್ಯರ್ಥಿಗಳ ಇಂಗ್ಲಿಷ್ ಸಾಮರ್ಥ್ಯ, ಸಾಮಾನ್ಯ ಜ್ಞಾನ, ವಿಶ್ಲೇಷಣಾ ಸಾಮರ್ಥ್ಯ, ರೀಸನಿಂಗ್ ಕೌಶಲ್ಯ, ಸಾಮಾನ್ಯ ಗಣಿತ ಮುಂತಾದ ವಿಷಯಗಳಲ್ಲಿತ್ತು! ನಮ್ಮ ವಿದ್ಯಾರ್ಥಿಗಳು ಪುಸ್ತಕದ ಹುಳುಗಳಂತೆ, ಕೆಮಿಸ್ಟ್ರಿಯಲ್ಲಿ ಏನು ಕೇಳಿದರೂ ಉತ್ತರಿಸುತ್ತೇವೆ ಎಂಬ ಮನಸ್ಥಿತಿಯಲ್ಲಿ ಇದ್ದವರೂ, 50ರಲ್ಲಿ ಉಳಿದ 25 ಪ್ರಶ್ನೆಗಳಿಗೆ ಉತ್ತರಿಸುವಾಗ ಕಕ್ಕಾಬಿಕ್ಕಿಯಾದರು.

ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಮಟ್ಟಗಳಲ್ಲಿ ಮೂರು ವರ್ಷಕ್ಕೊಮ್ಮೆ ಪಠ್ಯಕ್ರಮವನ್ನು ತಿದ್ದುವುದು ಅಥವಾ ಬದಲಿಸುವುದು ಕ್ರಮ. ಹತ್ತಾರು ವರ್ಷ ಹಳೆಯದನ್ನೇ ಪಾಠ ಮಾಡುವ ಉದಾಹರಣೆಗಳೂ ಇಲ್ಲದಿಲ್ಲ! ಹೀಗೆ ಹೊಸ ಪಠ್ಯಕ್ರಮಗಳನ್ನು ಸಿದ್ಧಪಡಿಸುವಾಗ ತಂತಮ್ಮ ಕ್ಷೇತ್ರಗಳಲ್ಲಿ ಆದ ಬದಲಾವಣೆಗಳನ್ನು ಹೊಸ ಆವಿಷ್ಕಾರಗಳನ್ನು ಗಮನದಲ್ಲಿ ಇಟ್ಟುಕೊಳ್ಳುತ್ತಾರೆ. ಸಮಕಾಲೀನವಾಗಿ ಚರ್ಚೆಯಲ್ಲಿರುವ ವಿಷಯಗಳನ್ನು ಸಂಬಂಧಿಸಿದಂತೆ ಯೋಚಿಸುತ್ತಾರೆಯೇ ವಿನಃ ಸಾಮಾನ್ಯವಾಗಿ ವಿದ್ಯಾರ್ಥಿಗಳ ಎಂಪ್ಲಾಯಬಿಲಿಟಿಯನ್ನು ಹೆಚ್ಚಿಸುವತ್ತ ತಲೆ ಕೆಡಿಸಿಕೊಳ್ಳುವುದಿಲ್ಲ.

ವಿಭಾಗಗಳಲ್ಲಿ ಪಾಠಗಳು ಕೂಡ ವಿಷಯಕ್ಕೆ ಬದ್ಧವಾಗಿ ನಡೆಯುತ್ತವೆ. ಆದರೆ ಉದ್ಯೋಗದಾತರ ಅವಶ್ಯಕತೆಗಳತ್ತ ಕಿಂಚಿತ್ತೂ ಯೋಚಿಸುವುದಿಲ್ಲ. ಮೇಷ್ಟ್ರುಗಳು ತಮಗೆ ನೀಡಲಾಗಿರುವ ಕೋರ್ಸುಗಳಲ್ಲಿ ಪಾಠ ಮಾಡಿ ಮುಗಿಸುವುದರಲ್ಲಿ ಸ್ಪರ್ಧೆಗಿಳಿಯುತ್ತಾರೆ. 16 ವಾರಗಳಲ್ಲಿ ಆಗಬೇಕಾದ ಪಾಠಗಳನ್ನು ನಾಲ್ಕೇ ವಾರಗಳಲ್ಲಿ ಮುಗಿಸಿ ಬೆನ್ನು ತಟ್ಟಿಕೊಳ್ಳುವ ಅಧ್ಯಾಪಕರೂ ಇರುತ್ತಾರೆ. ಆಶ್ಚರ್ಯವೆಂದರೆ ಪಾಠ ಮಾಡುವುದಷ್ಟೇ ತಮ್ಮ ಕೆಲಸ ಎಂಬ ನಿಲುಮೆ ಅನೇಕ ಅಧ್ಯಾಪಕರುಗಳದ್ದು. ಅವರು ಕಲಿಸಿದಷ್ಟಕ್ಕೆ ಪರೀಕ್ಷೆಗಳು ನಡೆಯುತ್ತವೆ. ಹೀಗಾಗಿ ವಿದ್ಯಾರ್ಥಿಗಳಿಗೆ ಸಹಜವಾಗಿ ಉನ್ನತ ಅಂಕಗಳು ಬರುತ್ತವೆ. ಉನ್ನತ ದರ್ಜೆಯಲ್ಲಿ

ಪದವಿಪತ್ರ ಸಿಗುತ್ತದೆ. ಆದರೆ, ಬರೋ ಅಂಕಗಳಿಗೆ ಸೀಮಿತವಾದವರಿಗೆ ಕೆಲಸ ಮಾತ್ರಸಿಕ್ಕುವುದಿಲ್ಲ.

ಯಾಕೆಂದರೆ ಇಂದಿನ ಉದ್ಯೋಗದ ಸೃಷ್ಟಿಕರ್ತರು ವಿಶ್ವವಿದ್ಯಾನಿಲಯಗಳು ನೀಡುವ ಅಂಕಗಳನ್ನು ನಂಬುವುದಿಲ್ಲ ಅಥವಾ ನೆಚ್ಚಿಕೊಂಡಿರುವುದಿಲ್ಲ. ವಿದ್ಯಾರ್ಥಿಯ ಸಾಮರ್ಥ್ಯವನ್ನು ಪಠ್ಯಕ್ರಮದ ಹೊರಗೂ ಪರೀಕ್ಷಿಸುತ್ತಾರೆ. ಉದಾಹರಣೆಗೆ ಇಂದು ಯಾವುದೇ ಕ್ಷೇತ್ರದಲ್ಲಿ ಕೆಲಸ ಸಿಗಲು ನಿಮ್ಮ ಇಂಗ್ಲಿಷ್ ಸಾಮರ್ಥ್ಯ ಪರೀಕ್ಷೆಗೊಳ್ಳುತ್ತದೆ. ಈಗ ರಾಜ್ಯಾದ್ಯಂತ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಹೆಸರಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಓದುವವರಾದರೂ ಕನ್ನಡದಲ್ಲಿ ಉತ್ತರ ಬರೆಯುತ್ತಾರೆ. ಯಾಕೆಂದರೆ ಅವರಿಗೆ ಇಂಗ್ಲಿಷ್ ಎಂದರೆ ಭಯ. ಇಂಗ್ಲಿಷ್‌ನಲ್ಲಿ ಬರೆಯುವ ಹಾಗೂ ಮಾತನಾಡುವ ಸಾಮರ್ಥ್ಯ ತೃಪ್ತಿಕರವಾಗಿ ಇರುವವರನ್ನು ಮಾತ್ರ ಇಂದಿನ ಕೈಗಾರಿಕೆಗಳು ಕೈಬೀಸಿ ಕರೆಯುತ್ತವೆ. ಇಂಗ್ಲಿಷ್‌ನಲ್ಲಿ ವ್ಯವಹರಿಸಲು ಸಾಧ್ಯವಿಲ್ಲವಾದರೆ ಕೆಲಸ ಸಿಗಲು ಅದು ನಿಮಗಿರುವ ಮೊದಲ ತೊಡಕಾಗುತ್ತದೆ. ಯಾವ ಕೆಲಸಕ್ಕೆ ನೀವು ಹೋಗುವುದಿದ್ದರೂ ಭಾಷೆಯೇ ನಿರ್ಣಾಯಕವಾಗುತ್ತದೆ.

ಭಾಷೆಯ ಹಾಗೆ ನಿಮಗೆ ಕೆಲಸಕ್ಕೆ ಕೈಬೀಸಿ ಕರೆಯುವಂತೆ ಮಾಡುವ ಅನೇಕ ಕೌಶಲಗಳಿವೆ. ಅವನ್ನು ಸೂಕ್ಷ್ಮಕೌಶಲಗಳು ಎನ್ನುತ್ತೇವೆ. ನಿಮ್ಮ ಪದವಿ ಹಾರ್ಡ್‌ವೇರ್ ಅಥವಾ ಯಂತ್ರಾಂಶವಾದರೆ ಈ ಸೂಕ್ಷ್ಮ ಕೌಶಲಗಳು ಸಾಫ್ಟ್‌ವೇರ್ ಇದ್ದ ಹಾಗೆ. ನಿಮ್ಮ ಸಂವಹನ ಕೌಶಲ, ವಿಶ್ಲೇಷಣಾ ಸಾಮರ್ಥ್ಯ, ಸರಳ ಗಣಿತ, ನಾಯಕತ್ವ ಗುಣ, ಸಮಯಕ್ಕೆ ನೀವು ಕೊಡುವ ಬೆಲೆ, ಕೆಲಸಕ್ಕೆ ಬದ್ಧತೆ, ಮುಂತಾಗಿ ಉದ್ಯೋಗದಾತ ನಿರೀಕ್ಷಿಸುವ ನಿಶ್ಚಿತ ಮಾನದಂಡಗಳಿವೆ. ಅವನ್ನು ಎಂಪ್ಲಾಯಿಬಿಲಿಟಿ ಸ್ಕಿಲ್ ಅಥವಾ ಉದ್ಯೋಗದಾಯಿ ಕೌಶಲಗಳು ಎನ್ನುತ್ತೇವೆ.

ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಯಾವುದೇ ಇರಲಿ–ಎಂಪ್ಲಾಯಬಿಲಿಟಿ ಕೌಶಲಗಳನ್ನು ಕಂಪಲ್ಸರಿಯಾಗಿ ಕಲಿಸಬೇಕಾದ ಕಾಲ ಬಂದಿದೆ. ಪದವಿ–ಎಂ.ಕಾಂ. ಇರಲಿ, ಎಂಎಸ್ಸಿ ಇರಲಿ ಯಾವುದೇ ಇರಲಿ, ಪಠ್ಯಕ್ರಮದಲ್ಲಿ 4 ಕ್ರೆಡಿಟ್‌ಗಳ ಒಂದು ಪಠ್ಯಕ್ರಮವಾಗಿ ಎಂಪ್ಲಾಯಬಿಲಿಟಿ ಸ್ಕಿಲ್‌ಗಳನ್ನು ಸೇರಿಸಬೇಕು. ಅಲ್ಲಿ ಕೆಲಸ ಸಿಕ್ಕಲು ಪದವಿ ಅಂಕಗಳಾಚೆ ಯಾವ್ಯಾವ ಕೌಶಲಗಳು ಬೇಕೋ ಅವನ್ನು ಕಡ್ಡಾಯವಾಗಿ ಬೋಧಿಸಬೇಕು. ಆಗ ವಿದ್ಯಾರ್ಥಿಗಳ ಉದ್ಯೋಗ ಸಾಮರ್ಥ್ಯ ಹೆಚ್ಚುತ್ತದೆ. ಕೆಲಸಗಳು ದೊರೆಯುವ ಸಾಧ್ಯತೆಯೂ ಹೆಚ್ಚುತ್ತದೆ. ಇದನ್ನು ವಿಶ್ವವಿದ್ಯಾನಿಲಯಗಳು ಹಾಗೂ ಅವುಗಳ ಅಧ್ಯಯನ ಮಂಡಳಿಗಳು ಗಂಭೀರವಾಗಿ ಜಾರಿಗೆ ತರುವ ತುರ್ತು ಅಗತ್ಯವಿದೆ. ಇಲ್ಲವಾದರೆ ನೀವು ರ್‍ಯಾಂಕ್ ನೀಡಿದ ವಿದ್ಯಾರ್ಥಿಗಳಿಗೂ ಅರೆಹೊಟ್ಟೆಯೇ ಗತಿ!

ಈ ನಿಟ್ಟಿನಲ್ಲಿ ನಮ್ಮ ವಿಶ್ವವಿದ್ಯಾನಿಲಯಗಳ ಅಧ್ಯಯನ ಮಂಡಳಿಗಳು





ಬದಲಾಗಬೇಕಿವೆ. ಅವು ತಮ್ಮ ನಿಗದಿತ ಫಿಸಿಕ್ಸ್, ಕೆಮಿಸ್ಟ್ರಿ, ಸೋಷಿಯಾಲಜಿ ಮುಂತಾದ ಕ್ಷೇತ್ರದಲ್ಲಿ ಕಲಿಸುವುದಕ್ಕೆ ಪಠ್ಯಕ್ರಮವನ್ನು ಸೀಮಿತಗೊಳಿಸದೆ ಎರಡು ಅಥವಾ ಮೂರು ವರ್ಷದ ಪ್ರತಿಯೊಂದು ಕೋರ್ಸಿನಲ್ಲೂ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಒತ್ತು ಕೊಡುವ ಒಂದು ಅಥವಾ ಎರಡು ಕೋರ್ಸ್‌ಗಳನ್ನು ಸೇರಿಸಬೇಕು. ಉದಾಹರಣೆಗೆ ಫಿಸಿಕ್ಸ್‌ಗೂ, ಕೆಮಿಸ್ಟ್ರಿಗೂ ಸೇರಬೇಕಾದ ನಾಲ್ಕು ಕ್ರೆಡಿಟ್‌ಗಳ ಒಂದು ಕೋರ್ಸ್–'ಎಂಪ್ಲಾಯಬಿಲಿಟಿ ಸ್ಕಿಲ್' ಅಥವಾ ಉದ್ಯೋಗ ಸಾಧ್ಯತೆ ಹೆಚ್ಚಿಸುವ ಕೌಶಲ. ಇದು ಎರಡು ವರ್ಷದ ಅವಧಿಯಲ್ಲಿ ಯಾವ ಸೆಮಿಸ್ಟರ್‌ನಲ್ಲಾದರೂ ಆಗಬಹುದು. ಆದರೆ ಇದನ್ನು ವಿದ್ಯಾರ್ಥಿಗಳ ಆಯ್ಕೆಗೆ ಬಿಡದೆ 'ಹಾರ್ಡ್‌ಕೋರ್ ಪೇಪರ್' ಆಗಿ ಎಲ್ಲಾ ವಿದ್ಯಾರ್ಥಿಗಳೂ ಈ ತರಬೇತಿ ಹೊಂದುವಂತೆ ಖಾತ್ರಿ ಪಡಿಸಿಕೊಳ್ಳಬೇಕು.

ಎರಡನೆಯದಾಗಿ, ವಿದ್ಯಾರ್ಥಿಗಳು ಗಣಿತಕ್ಕೋ, ಅರ್ಥಶಾಸ್ತ್ರಕ್ಕೋ ಸೀಮಿತರಾಗದೆ ಹೊರ ಜಗತ್ತಿನತ್ತ ಕಣ್ಣು ತೆರೆಯಬೇಕು. ಮೂಲತಃ ಸಮಕಾಲೀನ ವಿಷಯಗಳತ್ತ ಚಿಂತಿಸಲು ಸಮಾನ ಮನಸ್ಕರ ಗುಂಪಿನಲ್ಲಿ ಚರ್ಚೆಯಲ್ಲಿ ತೊಡಗಿಸಿಕೊಳ್ಳಬೇಕು. ಈಗ ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳ ಆಯ್ಕೆ ಪ್ರಕ್ರಿಯೆಯ ಒಂದು ಭಾಗವೆಂದರೆ ಗುಂಪು ಸಮಾಲೋಚನೆ, ಚರ್ಚೆ. ಅದರಲ್ಲಿ ವಿದ್ಯಾರ್ಥಿಯು ತೊಡಗಿಸಿಕೊಳ್ಳುವುದನ್ನು ಗಮನವಿಟ್ಟು ನೋಡಿ, ಚುರುಕಾಗಿರುವವರನ್ನು ಆಯ್ಕೆ ಮಾಡಲಾಗುತ್ತದೆ. ಹೀಗಾಗಿ ಕೆಲಸ ಸಿಗಲು ಬಹಳ ಮುಖ್ಯ ಅಗತ್ಯ ಗುಂಪಲ್ಲಿ ಮಾತಾಡುವುದು, ತನ್ನ ಅಸ್ತಿತ್ವ ಪ್ರತಿಷ್ಠಾಪಿಸುವುದಾಗಿದೆ. ಇಂಥ ಗುಂಪು ಚರ್ಚೆಯಲ್ಲಿ ತೊಡಗಿಸಿಕೊಂಡಾಗ ವಿಶ್ಲೇಷಣಾ ಸಾಮರ್ಥ್ಯ, ತರ್ಕ ಸಾಮರ್ಥ್ಯ ಎಲ್ಲವೂ ಹೆಚ್ಚುತ್ತವೆ. ಜೊತೆಗೆ ಇಂಗ್ಲಿಷ್ ಮಟ್ಟ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಇದ್ಯಾವುದೂ ಮಾಡದೆ ಪರೀಕ್ಷೆಯ ಅಂಕವೊಂದನ್ನೇ ನೆಚ್ಚಿಕೊಂಡು ಕುಳಿತಿರುವವರಿಗೆ ಇದು ಕಾಲವಲ್ಲ!

ವಿಚಿತ್ರವಾಗಿ ಕಾಣುವುದೆಂದರೆ, ಮಾಧ್ಯಮಗಳು ಹೆಚ್ಚಿದಷ್ಟು ನಮ್ಮ ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನ ಹೆಚ್ಚುತ್ತಿಲ್ಲ. ಅವರ ಕೈಯಲ್ಲಿರುವ ಮೊಬೈಲಿನಲ್ಲಿ ಎಲ್ಲವೂ ಇರುತ್ತದೆ. ಆದರೆ ಅದು ತಲೆಯಲ್ಲಿರುವುದಿಲ್ಲ. ಈಗ ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನದತ್ತ ತಲೆ ಕೆಡಿಸಿಕೊಳ್ಳುವುದು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಂಡಾಗ ಮಾತ್ರ. ಆದರೆ ಸಾಮಾನ್ಯ ಜ್ಞಾನವೆಂಬುದು ರಾತ್ರೋ ರಾತ್ರಿ ಕಲಿಯಲ್ಪಡುವುದಲ್ಲ. ನಿರಂತರವಾಗಿ ಪತ್ರಿಕೆಗಳನ್ನು ಓದುತ್ತಿದ್ದರೆ, ಜಗತ್ತಿನ ವಿಷಯಗಳ ಪುಸ್ತಕಗಳನ್ನು ಓದುತ್ತಿದ್ದರೆ ತಾನಾಗಿ ಬರುತ್ತದೆ. ಇಂದು ಎಲ್ಲೇ ಕೆಲಸ ತೆಗೆದುಕೊಳ್ಳಬೇಕಾದರೆ ನಿಮ್ಮ ಸಾಮಾನ್ಯ ಜ್ಞಾನ ಪರೀಕ್ಷೆಗೆ ಒಳಪಡುತ್ತದೆ.

ಅದರ ಅರ್ಥ–ಈಗ ಕೆಲಸ ಸಿಗಲು ಪರೀಕ್ಷೆಯ ಅಂಕವೊಂದೇ ಸಾಲದು. ಬದಲಾಗಿ ಅಭ್ಯರ್ಥಿಯ ವ್ಯಕ್ತಿತ್ವ, ಸೂಕ್ಷ್ಮ ಕೌಶಲಗಳಲ್ಲಿ ಜಾಣ್ಮೆ ಗಣನೆಗೆ ಬರುತ್ತದೆ. ಸರಳವಾಗಿ ಹೇಳುವುದಾದರೆ ನಿಮ್ಮ ಮಾತುಕತೆ, ಆಕರ್ಷಕ ವ್ಯಕ್ತಿತ್ವ ಮುಖ್ಯವೆನಿಸಿಕೊಳ್ಳುತ್ತದೆ. ಕೆಲಸ ಸಿಕ್ಕುತ್ತಿಲ್ಲವೆಂದು ಕೊರಗುವವರು ತಮ್ಮ ಸೂಕ್ಷ್ಮ ಕೌಶಲಗಳನ್ನು ಅಭಿವೃದ್ಧಿ ಪಡಿಸಿಕೊಂಡರೆ ಕೆಲಸ ತಾನಾಗಿಯೇ ಸಿಕ್ಕುತ್ತದೆ.

# ಕೋಳಿಹಿಕ್ಕೆಯಿಂದ ವಿದ್ಯುತ್!

ದನ, ಎಮ್ಮೆಗಳ ಸೆಗಣಿಯಿಂದ ಅನಿಲ ಉತ್ಪಾದಿಸಿ ಅಡುಗೆಗೆ ಬಳಸುವುದು ಹೊಸದೇನಲ್ಲ. ಆದರೆ ಕೋಳಿಹಿಕ್ಕೆಯಿಂದ ಅನಿಲ ಉತ್ಪಾದಿಸಬಹುದೆಂಬ ಸಂಗತಿ ಇನ್ನೂ ರೈತರ ಗಮನಕ್ಕೆ ಬಂದಿಲ್ಲ. ತಮಿಳುನಾಡಿನ ರೈತರು ಆ ದಿಸೆಯಲ್ಲಿ ಹೆಜ್ಜೆಯಿಟ್ಟಿದ್ದಾರೆ. ಕಳೆದ 15 ವರ್ಷಗಳಿಂದ ಅಲ್ಲಿನ ರೈತರು ಕೋಳಿ ಹಿಕ್ಕೆಯನ್ನು ಉಪಯೋಗಿಸಿ ಅನಿಲ ಉತ್ಪಾದಿಸುತ್ತಿದ್ದಾರೆ. ಹೀಗೆ ಉತ್ಪಾದಿಸಿದ ಅನಿಲವನ್ನು ಅವರು ಅಡುಗೆಗೆ ಬಳಸುವುದಿಲ್ಲ. ಬದಲಾಗಿ ಅದರಿಂದಲೇ ವಿದ್ಯುತ್ ಉತ್ಪಾದಿಸಿ, ಪಂಪ್‌ಸೆಟ್ ಚಾಲನೆ ಮಾಡುತ್ತಿದ್ದಾರೆ.

ಕೇವಲ ಕೋಳಿ ಹಿಕ್ಕೆ ಮಾತ್ರವಲ್ಲ, ಸಾಕಾಣಿಕೆ ಕೇಂದ್ರಗಳಲ್ಲಿ ಸತ್ತಿರುವ ರೋಗಪೀಡಿತ ಕೋಳಿಗಳನ್ನು ಅದರೊಂದಿಗೆ ಸೇರಿಸಿ ಇನ್ನಷ್ಟು ಅನಿಲ ಉತ್ಪಾದನೆ ಸಾಧ್ಯವೆಂದು ತೋರಿಸಿದ್ದಾರೆ. ಹಲವು ಕಡೆ ವಿದ್ಯುತ್ ಉತ್ಪಾದಕ ಯಂತ್ರಗಳಿಗೆ ಇದರ ಅನಿಲವೇ ವರದಾನವಾಗಿದೆ.

ಇದೀಗ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಕೃಷಿ ಅಧಿಕಾರಿಗಳು ತಮಿಳುನಾಡಿಗೆ ತೆರಳಿ ಇದರ ಬಗ್ಗೆ ಅಧ್ಯಯನ ಮಾಡಿ ಬಂದಿದ್ದಾರೆ. ಇಲ್ಲಿಯೂ ಕೋಳಿ ಹಿಕ್ಕೆಯ ಅನಿಲ ಸ್ಥಾವರಗಳು ತಲೆಯೆತ್ತಲು ಅವರು ಸಹಕಾರ ನೀಡಲಿದ್ದಾರೆ. ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮದ ಮೂಲಕ ಇಂಥ ಘಟಕ ಸ್ಥಾಪನೆಗೆ ಸಹಾಯಧನವೂ ಸಿಗುತ್ತದೆ.

## ಆರಂಭ

ಕೋಳಿ ಹಿಕ್ಕೆ ಬಳಸಿ ವಿದ್ಯುತ್ ಉತ್ಪಾದಿಸುವ ಈ ಚೋದ್ಯಕ್ಕೆ ಅಡಿಯಿಟ್ಟಿದ್ದು ತಮಿಳುನಾಡಿನ ಸೇಲಂ ಜಿಲ್ಲೆಯ ನಾಮಕ್ಕಲ್ ತಾಲ್ಲೂಕಿನ ಕಾರೆಪುರ್ಚಿ ಪುದೂರು ಗ್ರಾಮದಲ್ಲಿ. ನಾಲ್ಕೈದು ಸಾವಿರ ಜನಸಂಖ್ಯೆಯ ಈ ಊರಿನಲ್ಲಿ ರೈತರು ನಡೆಸುವ ‘ವೆಂಕಟೇಶ್ವರ ಏಜೆನ್ಸೀಸ್’ ಎಂಬ ದೊಡ್ಡ ಕೋಳಿ ಫಾರ್ಮ್ ಇದೆ. ಇದರಲ್ಲಿ 40 ಸಾವಿರ ಮೊಟ್ಟೆ ಇಡುವ ಹಾಗೂ ಒಂದು ಲಕ್ಷ ಮಾಂಸದ ಕೋಳಿಗಳಿವೆ. ದಿನವೂ ರಾಶಿ ಬೀಳುವ ಹಿಕ್ಕೆಯನ್ನು ಸಾಕಷ್ಟು ಪ್ರಮಾಣದಲ್ಲಿ ಮಾರಾಟ ಮಾಡುತ್ತಾರೆ. ಇದರಲ್ಲಿ ಮೂರು ಟನ್ ಹಿಕ್ಕೆಯನ್ನು ಬಳಸಿ ಅನಿಲ ಉತ್ಪಾದನೆ ಆರಂಭಿಸಿದ್ದಾರೆ. ಅನಿಲ ಸ್ಥಾವರದ ವಿಸ್ತೀರ್ಣ 200 ಕ್ಯೂಬಿಕ್ ಚದರ ಅಡಿಗಳಷ್ಟಿದೆ.

ಇಲ್ಲಿರುವ ಅನಿಲ ಸ್ಥಾವರದ ಡ್ರಮ್ ‘ಸ್ಟೇನ್‌ಲೆಸ್ ಸ್ಟೀಲ್’ನಿಂದ ತಯಾರಾಗಿದೆ. ಅದರ ಎರಡೂ ಬದಿಯ ಕವಚ ‘ಫೈಬರ್’ನಿಂದ ಸಿದ್ಧವಾಗಿದೆ. ಇಲ್ಲಿ ಉತ್ಪಾದನೆಯಾಗುತ್ತಿರುವ ಅನಿಲದಿಂದ 143 ಅಶ್ವಶಕ್ತಿಯ ವಿದ್ಯುಜ್ಜನಕ (ಜನರೇಟರ್) ಯಂತ್ರ ಚಾಲನೆಯಾಗುತ್ತದೆ.



ಆರು ಗಂಟೆಗಳ ಕಾಲ 35 ಕಿಲೋವ್ಯಾಟ್ ತ್ರೀ ಫೇಸ್ ವಿದ್ಯುತ್ ನಿರಂತರ ಹರಿದು ಬರುತ್ತದೆ. ಇದನ್ನು ಕೋಳಿ ಸಾಕಾಣಿಕೆ ಕೇಂದ್ರದ ಹವಾನಿಯಂತ್ರಣ ವ್ಯವಸ್ಥೆಗೆ ಉಪಯೋಗಿಸುತ್ತಾರೆ.

ಡೀಸೆಲ್‌ನಿಂದ ನಡೆಯುವ ವಿದ್ಯುಜ್ಜನಕ ಯಂತ್ರಕ್ಕೂ ಅನಿಲ ಚಾಲಿತವಾದ ಈ ಯಂತ್ರಕ್ಕೂ ಸಣ್ಣ ವ್ಯತ್ಯಾಸವಿದೆ. ‘ಅನಿಲದಿಂದ ಹರಿದು ಬರುವ ವಿದ್ಯುತ್‌ನ ಆರ್‌ಎಂಪಿ 1500ರಷ್ಟಿದ್ದು, ಅದರಲ್ಲಿರುವ ವಿದ್ಯುತ್ ಅಂಶ ಶೇ. 75ರಷ್ಟು ಮಾತ್ರವಿದೆ. ಡೀಸೆಲ್‌ನಿಂದ ಶೇ. 100ರಷ್ಟು ವಿದ್ಯುತ್ ಬರುವುದಾದರೆ ಇಲ್ಲಿ ಶೇ. 25 ಕಡಿಮೆಯಾಗುತ್ತದೆಂದು’ ಕೋಳಿ ಸಾಕಾಣಿಕೆ ಕೇಂದ್ರದ ವ್ಯವಸ್ಥಾಪಕ ಸುಕುಮಾರ್ ಹೇಳುತ್ತಾರೆ. ‘ಇತ್ತೀಚಿನ ತನಕ ಸೆಗಣಿ ಮತ್ತು ಕೋಳಿಹಿಕ್ಕೆಯ ಅನಿಲದ ಜತೆಗೆ ನೀರಿನಂಶವೂ ಇರುವುದರಿಂದ ಯಂತ್ರ ಚಾಲನೆಗೆ ತೊಡಕಾಗುತ್ತಿತ್ತು. ಈಗ ಆ ತೊಂದರೆಯನ್ನು ನಿವಾರಿಸಬಲ್ಲ ತಂತ್ರಜ್ಞಾನ ನಮ್ಮ ಕೈಗೆಟುಕಿದೆ’ ಎನ್ನುತ್ತಾರೆ.

## ತಯಾರಿ ಹೇಗೆ?

ಕೋಳಿ ಹಿಕ್ಕೆಯ ರಾಶಿಯನ್ನು ನೀರಿನೊಂದಿಗೆ ಮಿಶ್ರ ಮಾಡಲು ಐದು ಅಶ್ವಶಕ್ತಿ ಸಾಮರ್ಥ್ಯದ ಮಿಕ್ಸಿಂಗ್ ಯಂತ್ರವಿದೆ. ಕೂಲಿಗಳ ಅಭಾವ ಇರುವ ಕಾರಣ ಒಮ್ಮೆಲೇ ಇಷ್ಟು ಹಿಕ್ಕೆಯನ್ನು ಮಿಶ್ರ ಮಾಡಿ, ಪರಿಮಿತಿಯಿಂದ ವಿದ್ಯುತ್ ಪಡೆಯುತ್ತೇವೆ. ಕೂಲಿಗಳ ನೆರವು ಸಾಕಷ್ಟಿದ್ದರೆ ಇಲ್ಲಿರುವ ಹಿಕ್ಕೆಗಳಿಂದ ನಿರಂತರ ವಿದ್ಯುತ್ ಪಡೆಯಲು ಸಾಧ್ಯವಾಗುತ್ತಿತ್ತೆಂದು ಸುಕುಮಾರ್ ಹೇಳುತ್ತಾರೆ. 10 ವರ್ಷಗಳಿಂದ ಕೊಯಮತ್ತೂರಿನಲ್ಲಿ ವಿಶೇಷವಾಗಿ ತಯಾರಿಸಲಾದ ಯಂತ್ರವೇ ಅಲ್ಲಿ ಇನ್ನೂ ವಿದ್ಯುತ್ ಉತ್ಪಾದಿಸುತ್ತ ಬಂದಿದೆ. ಆದರೆ ಈ ಯಂತ್ರ ಇದುವರೆಗೆ ಒಮ್ಮೆಯೂ ಕೆಟ್ಟುಹೋಗಿಲ್ಲ ಎನ್ನುವುದು ವಿಶೇಷ. ಘಟಕ ಸ್ಥಾಪನೆಗೆ ಆಗ 10 ಲಕ್ಷ ರೂಪಾಯಿ ಖರ್ಚಾಗಿತ್ತಂತೆ.

ಸತ್ತ ಕೋಳಿಗಳನ್ನು ಅನಿಲ ಸ್ಥಾವರಕ್ಕೆ ಸೇರಿಸಲು ಪ್ರತ್ಯೇಕ ಕಿಂಡಿಯೊಂದಿದೆ. ವಿದ್ಯುತ್ ಉತ್ಪಾದನೆಯ ಬಳಿಕ ದೊರಕುವ ಅದರ ಎಲುಬು, ಗರಿ ಇತ್ಯಾದಿ ತ್ಯಾಜ್ಯ ಹೊರಗೆ ಬರುವುದಕ್ಕೂ ಬೇರೆ ದಾರಿಯಿದೆ. ಅನಿಲ ಪಡೆದ ಅನಂತರ ಹರಿದು ಬರುವ ಬಗ್ಗಡ, ಎಲುಬು ಕೃಷಿಗೆ ಅತ್ಯುಪಯುಕ್ತ. ಸನಿಹದ ರಾಸೀಪುರಂನಲ್ಲಿ ಜಾನುವಾರುಗಳ ಸೆಗಣಿಯ ಅನಿಲದಿಂದ ಐದು ಅಶ್ವಶಕ್ತಿಯ ವಿದ್ಯುತ್ ಜನಕ ಯಂತ್ರಕ್ಕೆ ಚಾಲನೆ ಸಿಕ್ಕಿದೆ. 12 ಹಸುಗಳ ಸೆಗಣಿಯಿಂದ ಸಿಗುವ ವಿದ್ಯುತ್ ಒಂದು ಕಾನ್ವೆಂಟ್‌ನ ಬಳಕೆಗೆ ಸಾಲುತ್ತದೆ.

ಪ್ರತ್ಯೇಕ ಖರ್ಚಿಲ್ಲದೆ ಸಿಗುವ ವಿದ್ಯುತ್‌ನಿಂದಾಗಿ ಹಾಕಿದ ಬಂಡವಾಳ ಬಲುಬೇಗನೆ ಬರುವುದರಿಂದಾಗಿ ತಮಿಳುನಾಡಿನಲ್ಲಿ ಕೋಳಿ ಸಾಕಾಣಿಕೆ ಮಾಡುವ ರೈತರು ಚಿಕ್ಕ ಚಿಕ್ಕ ಪ್ರಮಾಣದಲ್ಲಿ ಅದರಿಂದ ವಿದ್ಯುತ್ ಉತ್ಪಾದಿಸುತ್ತಿದ್ದಾರೆ. ಕರ್ನಾಟಕದಲ್ಲೂ ಈ ಬಗೆಗೆ ಚಿಂತನೆ ಮಾಡುವುದರಿಂದ ವಿದ್ಯುತ್ ಅಭಾವಕ್ಕೆ ಪರಿಹಾರ ಸಿಗಬಹುದು.

# ಕೋಪದಿಂದ ಬರುವಂತಹ ಸ್ಟ್ರೆಸ್‌ಅನ್ನು ಹೇಗೆ ತಡೆಗಟ್ಟುವುದು?

ಕೋಪ ಮನುಷ್ಯನಿಗೆ ಒಂದು ಶಾಪ ಇದ್ದ ಹಾಗೆ. ಒಂದು ಬಾರಿ ಕೋಪ ಮಾಡಿಕೊಂಡರೆ ಒಂದು ತಿಂಗಳು ಆಯಸ್ಸು ಕಡಿಮೆ ಆಗುತ್ತದೆ. ನಮಗೆ ಯಾವಾಗ ಕೋಪ ಬರುತ್ತದೆ ಎಂದರೆ ನಾವು ಅಂದುಕೊಂಡಿದ್ದು ನಡೆಯದೆ ಇದ್ದಾಗ, ನಮ್ಮ ಮಾತನ್ನು ಇನ್ನೊಬ್ಬರು ಕೇಳದಿದ್ದಾಗ, ನಮಗೆ ಯಾರಾದರೂ ನಿಂದಿಸಿದಾಗ, ಕೋಪದಿಂದ ಮನಸ್ಸು ಮತ್ತು ದೇಹ ಎರಡೂ ಕೆಡುತ್ತದೆ ಹಾಗೂ ನಮ್ಮ ಸುತ್ತಮುತ್ತಲಿರುವ ವಾತಾವರಣವು ಹದಗೆಡುತ್ತದೆ. ಕೋಪದಿಂದ ಆರೋಗ್ಯವು ಹದಗೆಡುತ್ತದೆ.

ಉದಾಹರಣೆಗೆ ನೀವು ನಿಮ್ಮ ಮನೆಯ ಒಂದು ರೂಮಿನಲ್ಲಿ ಬಾಗಿಲನ್ನು ಹಾಕಿಕೊಂಡು ಅರ್ಧ ಗಂಟೆ ನಿಮ್ಮ ಶತ್ರುಗಳನ್ನು ನೆನೆಸಿಕೊಂಡು ಗಟ್ಟಿಯಾಗಿ ಮನಸಾರೆ ಬೈಯಿರಿ. ಅದಾದ ನಂತರ ನಿಮ್ಮ ಮನಸ್ಸು ಮತ್ತು ದೇಹದ ಉಷ್ಣಾಂಶ ಸಹಜ ಸ್ಥಿತಿಗೆ ಬರಬೇಕಾದರೆ 24 ಗಂಟೆಗಳು ಬೇಕು. ನೀವು ಬೈಯುವುದನ್ನು ನಿಲ್ಲಿಸಿರಬಹುದು. ಆದರೆ ಕೋಪ ಮನಸ್ಸಿನಲ್ಲಿಯೇ ಇದ್ದು ಒತ್ತಡಕ್ಕೆ ಕಾರಣವಾಗುತ್ತದೆ. ಇದು ನಿಮ್ಮ ನರಮಂಡಲದ ಮೇಲೂ ಕೆಟ್ಟ ಪರಿಣಾಮ ಬೀರಿ ಹೃದಯಾಘಾತವಾಗಬಹುದು. ನಿಮ್ಮ ದೇಹದಲ್ಲಿರುವ ಹಾರ್ಮೋನುಗಳು ವೈಪರೀತ್ಯವಾಗುತ್ತವೆ.

ಭಾರತ ಮತ್ತು ಇಂಗ್ಲೆಂಡ್ ನಡುವೆ ಟೆಸ್ಟ್ ಮ್ಯಾಚ್ ನಡೆಯುತ್ತಿತ್ತು. ಒಬ್ಬ ವ್ಯಕ್ತಿ ಕ್ರಿಕೆಟ್ ಮ್ಯಾಚನ್ನು ಬಹು ಕುತೂಹಲದಿಂದ ನೋಡುತ್ತಿದ್ದ. ಅಕಾಲಿಕವಾಗಿ ಭಾರತ ಸೋಲನ್ನು ಅನುಭವಿಸಿತು. ಆಗ ಟಿವಿ ನೋಡುತ್ತಿದ್ದಂತಹ ವ್ಯಕ್ತಿ ತನ್ನ ಕೈಯಲ್ಲಿದ್ದ ಮೊಬೈಲನ್ನು ಟೀವಿಗೆ ಎಸೆದ. ಆಗ ಟೀವಿಯು ಹಾಳಾಯಿತು. ಮೊಬೈಲು ಹಾಳಾಯಿತು. ಮನಸ್ಸಿಗೆ ಘಾಸಿ ಆಯಿತು. ಅಂತಹ ಸಮಯ ನಿಮಗೆ ಒದಗಿ ಬಂದಾಗ ಆಟ ಸೋಲುತ್ತದೆ ಎನಿಸುತ್ತಿದ್ದಾಗ ಅದನ್ನು ಉಡಾಫೆ ಮಾಡಿ ನೀವು ಬೇರೆ ಕೆಲಸದ ಕಡೆಗೆ ಗಮನ ಕೊಡಬೇಕು. ನಿಮಗೆ ಬಂದ ಕೋಪವನ್ನು ಸೃಜನಾತ್ಮಕವಾಗಿ ಸಾಧನೆ ಕಡೆಗೆ ತಿರುಗಿಸಿ ಯಾವುದು ಅಸಾಧ್ಯವೋ ಅದನ್ನು ಮಾಡಿ ತೋರಿಸಿ.

ಕೋಪ ಬರುವುದು ಸರ್ವೇ ಸಾಮಾನ್ಯ. ಆಗ ನಿಧಾನ ಗತಿಯ ಉಸಿರಾಟ ಮಾಡಿ ಅದನ್ನು ತಡೆಗಟ್ಟಬಹುದು. ಧ್ಯಾನ ಮತ್ತು ಶಾಂತಿಧಾಮಗಳಾದ ದೇವಸ್ಥಾನ, ಯೋಗ ತರಗತಿಗಳು ಮತ್ತು ಆಶ್ರಮಗಳಿಗೆ ಹೋಗಿ ಮನಸ್ಸನ್ನು ನಿರಾಳ ಮಾಡಿಕೊಳ್ಳಬಹುದು. ಎಲ್ಲದಕ್ಕೂ ಮುಖ್ಯವಾಗಿ ನಿಮ್ಮ ಮಾನಸಿಕ ಆರೋಗ್ಯ ಮುಖ್ಯ. ಅದನ್ನು ಹೆಚ್ಚಿಸಿಕೊಳ್ಳಿ.



# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

ಪ್ರೊ. ಬಿ. ನಾರಾಯಣಮ್ಮ





ಶ್ರೀ ಮರಿಮಲ್ಲಯ್ಯ

| **ತಮ್ಮಂದಿರ ಹೆಸರು** | **ನೀಡಿದ ಪ್ರಾಂತ್ಯ** |
|---|---|
| ಭದ್ರೇಗೌಡರಿಗೆ | ಮಿಡಿಗೇಶಿ |
| ವೀರಣ್ಣಗೌಡರಿಗೆ | ಮಧುಗಿರಿ |
| ಗಿಡ್ಡೇಗೌಡರಿಗೆ | ಮುಳಬಾಗಿಲು |
| ಮುತ್ತೇಗೌಡರಿಗೆ | ಸುಗಟೂರು |
| ಸಿದ್ದೇಗೌಡರಿಗೆ | ಕೋಲಾರ |
| ತಮ್ಮೇಗೌಡರಿಗೆ | ಕುಣಿಗಲ್ |
| **ತಮ್ಮ ಮಕ್ಕಳ ಹೆಸರು** | |
| ಜಯಪ್ಪಗೌಡರಿಗೆ | ಯಲಹಂಕ |
| ಸಣ್ಣಭೈರೇಗೌಡರಿಗೆ | ದೇವನಹಳ್ಳಿ |
| ಭೈರೇಗೌಡರಿಗೆ | ಚಿಕ್ಕಬಳ್ಳಾಪುರ |
| ಮಲ್ಲಭೈರೇಗೌಡರಿಗೆ | ದೇವನಹಳ್ಳಿ |

ಈ ರೀತಿ ಹಂಚಿಕೆಯಾದ ಪ್ರಾಂತ್ಯಗಳನ್ನು ಯಶಸ್ವಿಯಾಗಿ ಆಳಿದರು. ರಣಭೈರೇಗೌಡರ ತಮ್ಮಂದಿರು ಹಾಗೂ ಗಂಡುಮಕ್ಕಳು.

**ಕೆಂಪನಂಜೇಗೌಡರು:** ಗಿಡ್ಡಪ್ಪಗೌಡರು ಯಶಸ್ವಿಯಾಗಿ ರಾಜ್ಯಾಡಳಿತವನ್ನು ನಡೆಸಿದ ಮೇಲೆ ಕೆಂಪನಂಜೇಗೌಡರು ಯಲಹಂಕ ನಾಡ ಪ್ರಭುಗಳಾದರು. ತಮ್ಮ ತಂದೆ, ತಾತಂದಿರಂತೆ ಉತ್ತಮವಾದ ರಾಜ್ಯಾಡಳಿತವನ್ನು ನಡೆಸಿದರು. ಯಲಹಂಕದ ಬಳಿ ಇರುವ ಹಳೆಯ

ಬೆಂಗಳೂರು ಎಂಬ ಗ್ರಾಮದ ಸಂಬಂಧಿಕರ ಮನೆಯ ಹುಡುಗಿ ಕೆಂಪಮ್ಮನೊಂದಿಗೆ ಕೆಂಪನಂಜೇಗೌಡರ ವಿವಾಹವಾಯಿತು. ಇವರಿಗೆ ಇಬ್ಬರು ಗಂಡುಮಕ್ಕಳಾದರು. ಮಕ್ಕಳಿಗೆ ಗುರುಕುಲದಲ್ಲಿ ಉತ್ತಮ ಶಿಕ್ಷಣ ಕೊಡಿಸಿದರು. ಇವರ ರಾಜ್ಯದ ವಾರ್ಷಿಕ ಆದಾಯ ಒಂದು ಲಕ್ಷ ಸುವರ್ಣ ನಾಣ್ಯಗಳಿಗಿಂತ ಹೆಚ್ಚಾಗಿತ್ತು. ಮಳೆ-ಬೆಳೆ ಸಮೃದ್ಧವಾಗಿದ್ದವು. ಅಲಸೂರಿನ ದೇವಾಲಯಗಳನ್ನು ಅಭಿವೃದ್ಧಿ ಪಡಿಸಿದರು.

**ಕೆಂಪನಂಜೇಗೌಡರ ಕಾಲದ ವಿಜಯನಗರದ ಪರಿಸ್ಥಿತಿ:** ವಿಜಯನಗರ ಸಾಮ್ರಾಜ್ಯದಲ್ಲಿ ಅಧಿಕಾರಕ್ಕಾಗಿ ಕಿತ್ತಾಟ ಪ್ರಾರಂಭವಾಗಿತ್ತು. ಮಲ್ಲಿಕಾರ್ಜುನ ಎಂಬ ದೊರೆ ಅಸಮರ್ಥರಾಗಿದ್ದರು. ಕ್ರಿ.ಶ. 1458ರಲ್ಲಿ ಸಾಳುವ ವಂಶದ ನರಸಿಂಹ ಎಂಬುವರು ಸಿಂಹಾಸನದಲ್ಲಿ ಕುಳಿತು ರಾಜ್ಯವಾಳಉತ್ತಿದ್ದ ವಿರೂಪಾಕ್ಷರಾಯರನ್ನು ಕೆಳಗಿಳಿಸಿ ತಾವೇ ದೊರೆಯಾದರು. ಅವರ ನಂತರ ಇಮ್ಮಡಿ ನರಸಿಂಹ ಎಂಬ ದೊರೆ ಕೆಲವು ವರ್ಷಗಳ ಕಾಲ ರಾಜ್ಯವಾಳಿದರು. ಅವರ ಮರಣದ ನಂತರ ಕ್ರಿ.ಶ. 1509ರಲ್ಲಿ ಅತ್ಯಂತ ಸಮರ್ಥರಾಗಿದ್ದ ಶ್ರೀಕೃಷ್ಣದೇವರಾಯರು ಸಿಂಹಾಸನವನ್ನೇರಿದರು. ಸಾಮ್ರಾಜ್ಯದಲ್ಲಿದ್ದ ಅಶಾಂತಿ ದೂರವಾಯಿತು. ವಿಜಯನಗರ ಕೀರ್ತಿ ಎಲ್ಲ ಕಡೆಗೂ, ದೇಶ ವಿದೇಶಗಳಿಗೂ ಹರಡಿತು. ವಿದೇಶೀಯರು, ವಿದೇಶೀ ಪ್ರವಾಸಿಗರು ವಿಜಯನಗರದ ಸಾಮಂತರಾಜರಾಗಿ ಯಲಹಂಕ ನಾಡಿನಲ್ಲಿ ಆಳ್ವಿಕೆ ನಡೆಸುತ್ತಿದ್ದರು.

**ಬೆಂಗಳೂರು ನಿರ್ಮಾಪಕ ಕೆಂಪೇಗೌಡರು:** ಕೆಂಪನಂಜೇಗೌಡರ ಹಿರಿಯ ಪುತ್ರರಾದ ಕೆಂಪೇಗೌಡರು ಮತತು ಕಿರಿಯ ಪುತ್ರರಾದ ಕೆಂಪಸೋಮಣ್ಣನವರು ಗುರುಗಳಾದ ಮಾಧವಭಟ್ಟರ ಬಳಿ ಸಕಲ ವಿದ್ಯೆಗಳನ್ನು ಕಲಿತರು. ಗುರುಗಳಿಗೆ ಗುರುದಕ್ಷಿಣೆ ಕೊಡುವ ಅಪೇಕ್ಷೆಯಿಂದ, ಗುರುಗಳೇ ನಮ್ಮನ್ನು ಸಕಲವಿದ್ಯಾ ಪಾರಂಗತರನ್ನಾಗಿ ಮಾಡಿರುವಿರಿ. ಗುರುದಕ್ಷಿಣೆ ಕೊಡಬೇಕೆಂಬ ಅಪೇಕ್ಷೆ ಇದೆ. ತಾವು ದಯಮಾಡಿ ತಿಳಿಸಿ ಎಂದರು. ಗುರುಗಳು, ತಮ್ಮ ತಂದೆಯವರು ನಮಗೆ ಬೇಕಾದುದನ್ನೆಲ್ಲಾ ಒದಗಿಸಿದ್ದಾರೆ. ನಾವು ಸುಖ-ಸಂತೋಷಗಳಿಂದ ಜೀವನ ನಡೆಸುತ್ತಿದ್ದೇವೆ. ನಮಗೆ ಗುರುದಕ್ಷಿಣೆ ಬೇಕಿಲ್ಲ ಎಂದಾಗ, ಕೆಂಪೇಗೌಡರು ಹಾಗೂ ಕೆಂಪಸೋಮಣ್ಣನವರು ಬಹುಪರಿಯಾಗಿ ಪ್ರಾರ್ಥಿಸಿದರು. ಗುರುದಕ್ಷಿಣೆ ತೆಗೆದುಕೊಳ್ಳಲೇಬೇಕೆಂದರು. ಆಗ ಗುರುಗಳು ನಿಮಗೆ ಗುರುದಕ್ಷಿಣೆಯನ್ನು ಕೊಡಲೇಬೇಕೆಂದಿದ್ದರೆ ನಿಮ್ಮತಾಯಿಯವರನ್ನು ಕೇಳಿ ಎಂದರು. ಗುರುಪತ್ನಿನ್ನು ಕೆಂಪೇಗೌಡರು ಮತ್ತು ಕೆಂಪಸೋಮಣ್ಣನವರು ತಾಯಿ ಎಂದೇ ಕರೆಯುತ್ತಿದ್ದರು. ಗುರುಪತ್ನಿಉ, ನೀವು ನನ್ನ ಕೋರಿಕೆ ಎಷ್ಟು ಕಷ್ಟದ್ದಾದರೂ ನಡೆಸಿಕೊಡುವಿರಾ? ಎಂದು ಕೇಳಿದರು. ತಾಯಿ ನೀವು ಕೇಳುವ ಕೋರಿಕೆ ಎಷ್ಟು ಕಷ್ಟದ್ದಾದರೂ ತಮ್ಮ ಆಶೀರ್ವಾದದಿಂದ ನಡೆಸಿಕೊಡುತ್ತೇವೆ, ವಚನ ಕೊಡುತ್ತೇವೆ ಎಂದರು.

*(ಮುಂದುವರಿಯುವುದು)*





# ತಲಕಾಡಿನ ಗಂಗರು (ಕ್ರಿ.ಶ. 350-999)

**ಸಾಹಿತ್ಯ**

ಗಂಗರು ವಿದ್ಯಾಭಿಮಾನಿಗಳಾಗಿದ್ದು ಸಾಹಿತಿಗಳಿಗೆ ಆಶ್ರಯದಾತರಾಗಿದ್ದರು. ಇವರ ಆಶ್ರಯದಲ್ಲಿ ಕನ್ನಡ, ಸಂಸ್ಕೃತ ಹಾಗೂ ಪ್ರಾಕೃತ ಭಾಷೆಗಳಲ್ಲಿ ಅನೇಕ ಗ್ರಂಥಗಳು ರಚಿತವಾದವು. ಕ್ರಿ.ಶ. 9-10ನೇ ಶತಮಾನದವರೆಗಿನ ಬಹುತೇಕ ಶಾಸನಗಳು ಕನ್ನಡದಲ್ಲಿವೆ. ಶ್ರೀಪುರುಷ, ದುರ್ವಿನೀತ, ಶಿವಮಾರ, ಚಾವುಂಡರಾಯ ಸ್ವತಃ ವಿದ್ವಾಂಸರು ಹಾಗೂ ಕನ್ನಡ ಲೇಖಕರು. ದುರ್ವಿನೀತ ಸಂಸ್ಕೃತ ಮತ್ತು ಕನ್ನಡದಲ್ಲಿ ಘನಪಂಡಿತನಾಗಿದ್ದನು. ಪ್ರಾಕೃತದಲ್ಲಿನ ಗುಣಾಢ್ಯನ ವಡ್ಡಕಥಾ ಅಥವಾ ಬೃಹತ್ಕಥಾವನ್ನು ಸಂಸ್ಕೃತಕ್ಕೆ ಭಾಷಾಂತರಿಸಿದನು. ಪಾಣಿನಿಯ ವ್ಯಾಕರಣ ಮತ್ತು ಭಾರವಿಯ ಕಿರಾತಾರ್ಜುನೀಯದ ಹದಿನೈದನೆ ಮಂಡಲ ಕುರಿತು ಭಾಷ್ಯವನ್ನು ಬರೆದಿದ್ದಾನೆ. ದುರ್ವಿನೀತನ ಆಶ್ರಯ ಪಡೆದಿದ್ದ ಪೂಜ್ಯಪಾದರು ಶಬ್ದಾವತಾರ ಎಂಬ ವ್ಯಾಕರಣ ಗ್ರಂಥವನ್ನು ರಚಿಸಿದರು. ಹೆಸರಾಂತ ಜೈನಕವಿ ರನ್ನ ಸ್ವಲ್ಪ ಕಾಲ ಗಂಗರ ಆಶ್ರಯ ಪಡೆದುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಗಂಗ ಅರಸ ಶ್ರೀಪುರುಷ ಗಜಶಾಸ್ತ್ರವನ್ನು ರಚಿಸಿದ್ದಾನೆ. ಇವನ ಶಾಸನ ಕವಿಪರಮೇಶ್ವರ, ದೇವನಂದಿ (ಪೂಜ್ಯಪಾದ), ನಾಗವರ್ಮ ಮುಂತಾದ ಕವಿಗಳನ್ನು ಹೆಸರಿಸಿದೆ. ಗಂಗರ ಕಾಲದ ಪ್ರಮುಖ ಕವಿಗಳು:

| **ಕವಿಗಳು** | **ಕೃತಿಗಳು** |
|---|---|
| ಶ್ರೀಪುರುಷ (ದೊರೆ) | ಗಜಶಾಸ್ತ್ರ |
| ನಾಗವರ್ಮ | ಛಂದೋಂಬುಧಿ |
| ಚಾವುಂಡರಾಯ (ಮಂತ್ರಿ) | ಚಾವುಂಡರಾಯ ಪುರಾಣ |
| ಎರಡನೆ ಶಿವಮಾರ (ದೊರೆ) | ಸೇತುಬಂಧ, ಗಜಾಷ್ಟಕ |
| ದುರ್ವಿನೀತ ಮಾಧವ (ದೊರೆ) | ಬೃಹತ್ಕಥಾ (ಮೂಲ: ಗುಣಾಢ್ಯನ ವಡ್ಡಕಥಾ) ಭಾರವಿಯ ಕಿರಾತಾರ್ಜುನೀಯಕ್ಕೆ ಕನ್ನಡದಲ್ಲಿ ಟೀಕಾಗ್ರಂಥ |
| ಪೂಜ್ಯಪಾದ ದೇವನಂದಿ | ಶಬ್ದಾವತಾರ ವ್ಯಾಕರಣ |
| ವಿದ್ಯಾಧನಂಜಯ (ಹೇಮಸೇನ) | ರಾಘವ ಪಾಂಡವೀಯ |
| ವಾದೀಭಸಿಂಹ | ಗದ್ಯಚಿಂತಾಮಣಿ, ಕ್ಷಾತ್ರಚೂಡಾಮಣಿ |

**ಶಿಕ್ಷಣ**

ವಿದ್ಯಾಭಿವೃದ್ಧಿಗೆ ಗಂಗರು ಹೆಚ್ಚಿನ ಆದ್ಯತೆ ನೀಡಿದ್ದರು. ಅಗ್ರಹಾರಗಳು, ಧಾರ್ಮಿಕ ಮಠಗಳು, ಜೈನರ ಚೈತ್ಯಾಲಯಗಳು ವಿದ್ಯಾರ್ಜನೆಯ ಪ್ರಮುಖ ಕೇಂದ್ರಗಳಾಗಿದ್ದವು. ರಾಜಕುಮಾರರಿಗೆ ಶಿಕ್ಷಣ ಕಡ್ಡಾಯವಾಗಿತ್ತು. ತಾಂತ್ರಿಕ ಶಿಕ್ಷಣಕ್ಕೂ ಪ್ರೋತ್ಸಾಹವಿದ್ದಿತು. ಆದರೆ ಅದು ಆಧುನಿಕ ಶಿಕ್ಷಣದ ಅರ್ಥದಲ್ಲಲ್ಲ. ತತ್ವಶಾಸ್ತ್ರ, ಧರ್ಮಶಾಸ್ತ್ರಗಳ ಅಧ್ಯಯನ ಪ್ರಧಾನವಾಗಿತ್ತು. ತಲಕಾಡು ಪೆರೂರ್ ಮುಂತಾದ ಕಡೆಗಳಲ್ಲಿ ಇಂತಹ ಅಗ್ರಹಾರಗಳೂ ಚೈತ್ಯಾಲಯಗಳೂ ಇದ್ದುವು. ಅಗ್ರಹಾರಗಳಲ್ಲಿ ಭೂಮಿಯನ್ನು ಉಂಬಳಿ ಪಡೆದ ಬ್ರಾಹ್ಮಣರು ತಮ್ಮ ಶಿಷ್ಯರಿಗೆ ವೇದ, ಪುರಾಣ ಸ್ಮೃತಿಗಳನ್ನು ಬೋಧಿಸುತ್ತಿದ್ದರು. ಆದರೆ ಅದು ಎಲ್ಲರಿಗೂ ಲಭ್ಯವಾಗುತ್ತಿರಲಿಲ್ಲ. ಧಾರ್ಮಿಕ ಮಠಗಳು ಬಡವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದವು.

*(ಮುಂದುವರೆಯುವುದು)*

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

*ಸುಂದರ್, ಬೆಂಗಳೂರು*

**ಕೆಲವು ಹುಡುಗರು ಹುಡುಗಿಯರನ್ನು ಕಂಡ ತಕ್ಷಣ ಹಾರನ್ ಮಾಡುವುದೇಕೆ?**

ತಾವು ತುಂಬ ಸೌಂಡ್ ಪಾರ್ಟಿ ಎಂದು ಸೂಚಿಸಲು ಅಷ್ಟೆ.

*ಸ್ವಾಮಿ, ಗೌರಿಬಿದನೂರು*

**ಹೆಣ್ಣಿನ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ವಿದ್ಯೆಯನ್ನು ಹೇಳಿಕೊಡುವಿರಾ?**

ಸಾಧ್ಯವೇ ಇಲ್ಲ. ಹೆಣ್ಣು ಮೊಬೈಲ್‌ಗಳಂತೆ. ಅರ್ಥ ಮಾಡಿಕೊಂಡು ಹೇಳಿಕೊಡುವಷ್ಟರಲ್ಲಿ ಮಾಡೆಲ್ ಚೇಂಜ್ ಆಗ್ತವೆ.

*ಲಕ್ಷ್ಮಿ, ಮೈಸೂರು*

**ಗುರುವಿನ ಸಹಾಯವಿಲ್ಲದೆ ಎಲ್ಲರೂ ಸುಲಭವಾಗಿ ಕಲಿಯುವ ವಿದ್ಯೆ ಯಾವುದಾದರೂ ಇದೆಯೇ?**

ಹೆಣ್ಣಿಗೆ ಕನ್ನಡಿ ನೋಡುವುದು, ಗಂಡಿಗೆ ಹೆಣ್ಣನ್ನು ನೋಡುವುದು.

*ಲತಾ ಮೂರ್ತಿ, ಹಾಸನ*

**ಬುದ್ಧಿವಂತರಿಗೂ ಬುದ್ಧಿಜೀವಿಗಳಿಗೂ ಇರುವ ವ್ಯತ್ಯಾಸವೇನು?**

ಬುದ್ಧಿವಂತ ವಿಚಾರವಾದಿ, ಬುದ್ಧಿಜೀವಿ ಅವಕಾಶವಾದಿ.

*ಇಂದ್ರಾಣಿ, ಬೆಂಗಳೂರು*

**ಕಲ್ಪನೆ, ಕನಸು, ವಾಸ್ತವ ಈ ಮೂರರ ವ್ಯತ್ಯಾಸವೇನು?**

ಕಲ್ಪನೆ ರೂಪಸಿ, ಕನಸು ಪ್ರೇಯಸಿ, ವಾಸ್ತವ ಹೆಂಡತಿ.

*ಕುಮಾರಿ, ಶಿವಮೊಗ್ಗ*

**ಸನ್ಮಾನ ಮಾಡುವಾಗ ಶಾಲನ್ನು ಹೊದಿಸುವುದೇಕೆ?**

ಅಂದಿನ ಪದ್ಧತಿ. ಕವಿಗಳು ಬಡವರಾಗಿರುತ್ತಿದ್ದುದರಿಂದ ಜುಬ್ಬ, ಬನೀನುಗಳ ತೂತು ಮುಚ್ಚಲೆಂದು.

*ದಿನೇಶ್, ಮೈಸೂರು*

**ಇಂದಿನವರ ದುರಾಡಳಿತಕ್ಕಿಂತ ಅಂದಿನ ಬ್ರಿಟಿಷ್ ಆಳ್ವಿಕೆಯೇ ವಾಸಿ ಅಲ್ಲವೇ?**

ತಾಳ್ಮೆಇಂದಿರಿ, ಸ್ವಲ್ಪ ದಿವಸಗಳು ಮಾತ್ರ. ನಂತರ ದೇಶ ಮಾರಲ್ಪಟ್ಟು ಅವರೇ ಮತ್ತೆ ಬರುತ್ತಾರೆ!

*ಮಂಜುಳಾ, ಚನ್ನರಾಯಪಟ್ಟಣ*

**ಕಾಫಿ, ಟೀ ಎರಡೂ ಒಟ್ಟಿಗೆ ಸೇರಿದರೆ ಏನಾಗಬಹುದು?**

ಹಾಲು ಕಾಫಿಪುಡಿ, ಟೀಪುಡಿ ಎಲ್ಲವೂ ವೇಸ್ಟ್ ಆಗುತ್ತೆ ಅಷ್ಟೆ.

*ಮಧು, ಸಕಲೇಶಪುರ*

**ನಾ ನಕ್ಕಾಗ ಒಬ್ಬಾಕೆ ಕೆನ್ನೆಗೆ ಬಾರಿಸಿದಳು, ಏಕೆ?**

ಛೇ ಛೇ ತಿಳಿದುಕೊಳ್ಳದೆ ಬರಬಾರದಿತ್ತು. ಹೋಗಲಿ ಬಿಡಿ, ಮರಳಿ ಯತ್ನವ ಮಾಡಿ ಕಾರಣ ತಿಳಿಇಯುವ ತನಕ.

*ಅಕ್ಷರ, ಕೋಲಾರ*

**ರಾಷ್ಟ್ರಪತಿ ಪದದ ವಿರುದ್ಧ ಪದವೇನಿರಬಹುದು?**

ಹೈಕಮಾಂಡ್!

*ಜಯಾ, ರಾಯಚೂರು*

**ಮಾಧ್ಯಮಗಳಲ್ಲಿ ಜಾಹೀರಾತು ನಿಷೇಧಿಸಿದರೆ ಏನಾಗಬಹುದು?**

ಸುಂದರ ರೂಪದರ್ಶಿಯರ ದರ್ಶನ ತಪ್ಪಿ ಬೋರ್ ಆಗುತ್ತದೆ.

*ಶ್ರೀವತ್ಸ, ಹುಬ್ಬಳ್ಳಿ*

**ಮನುಷ್ಯನೂ ಪಕ್ಷಿಗಳಂತೆ ಹಾರಾಡುವಂತಿದ್ದರೆ?**

ಸಿಗ್ನಲ್ ಲೈಟ್ ಆಕಾಶದಲ್ಲೂ ಬೇಕಾಗುತ್ತಿತ್ತು.



# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ರಾಮಸಿಂಹಯ್ಯ: ಒಂದು ದಿನದ ಗಲಾಟೆಯಿಂದ ಆದ ಅನಾಹುತ ತಡೆಯಲು ಯತ್ನಿಸಿದರು. ಮೂರು ಲೋಕವೂ ಅಲ್ಲೋಲ ಕಲ್ಲೋಲವಾಯಿತು.

ಯಮ: ಬ್ರಹ್ಮಲೋಕಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ತಂಪಾಗಿ ಗಾಳಿ ಬೀಸುತ್ತಿದ್ದುದನ್ನು ಕಂಡು ಎಮ್ಮೆ ಹಸಿರು ಹುಲ್ಲನ್ನು ಮೇಯಲು ಯಮರಾಜನನ್ನು ತ್ರಿಶಂಕುವಿನಂತೆ ಮಧ್ಯದಲ್ಲಿ ಬಿಟ್ಟು ಓಡಿಹೋಯಿತು.

ನಾರದ: ನಾರಾಯಣ ನಾರಾಯಣ ನಾರಾಯಣ ಅಂತ ಆಕಾಶ ಮಾರ್ಗವಾಗಿ ಬರುತ್ತಿದ್ದನು. ಯಮರಾಜ ವಾಕ್ ಮಾಡುತ್ತಿರುವುದನ್ನು ನೋಡಿ ಆತಂಕಗೊಂಡು ನಾರಾಯಣ ನಾರಾಯಣ ಎಂದನು.

ಯಮ: ನಾರದ ಮಹರ್ಷಿಗಳಿಗೆ ನನ್ನ ಪ್ರಣಾಮಗಳು.

ನಾರದ: ಯಮರಾಜ ನಿನಗೆ ನಗ್ನವಾಗಲಿ ಎಂದು ಮುಂದೆ ನಡೆದರು.

ಯಮ: ನಡೆದು ನಡೆದು ಸುಸ್ತಾಗಿ ಒಂದು ಮರದ ಹತ್ತಿರ ಬಂದು ವಿಶ್ರಮಿಸಿದರು.

ಭೂಲೋಕದ ಅಪ್ಸರೆಯರು: ಒಬ್ಳು ಮಿಡಿ ಹಾಕಿದ್ಳು, ಇನ್ನೊಬ್ಳು ಸ್ಕರ್ಟ್ ಹಾಕಿದ್ಳು, ಇನ್ನೊಬ್ಳು ಚೂಡಿದಾರ್ ಹಾಕ್ಕೊಂಡಿದ್ಳು, ಇನ್ನೊಬ್ಳು ಮೈಕೈನ ಹಾವಭಾವ ಕಾಣುವಂತೆ ಮಸ್ಕಿಟ ತರ ಇರುವ ಡ್ರೆಸ್ಸನ್ನು ಹಾಕೊಂಡಿದ್ಳು, ಹುಡ್ಗ್ರು ಸಹ ಅವ್ರ ಹಿಂದೆ ಹಾಯ್ ಫಿಗರ್ ಎಂದು ರೇಗಿಸುತ್ತಾ ಬರ್ತ್ತಿದ್ರು. ಮರದ ಕೆಳ್ಗೆ ವಿಶ್ರಮಿಸುತ್ತಿರುವ ಅರ್ಧ ಬೆತ್ತಲೆಯಾದ ಯಮನನ್ನು ಕಂಡರು.

ಯಮ: ಕೋಮಲಾಂಗಿಯರೆ ನೀವು ಯಾರು? ಸರಿ ರಾತ್ರೀಲಿ ಏಕೆ ಸಂಚರಿಸುತ್ತಿರುವಿರಿ? ನಿಮ್ಮಂತಹ ಕೋಮಲಾಂಗಿಯರು ಹೀಗೆಲ್ಲಾ ಸಂಚರಿಸಬಾರದು.

ಅಪ್ಸರೆ: ವಾವ್ ಈ ಸುಂದರ ಪುರುಷನ ಬಾಹುಬಂಧನ ಸ್ಪರ್ಶಿಸಿದರೆ ನೀರಿನ ಚಿಲುಮೆ ಉಕ್ಕಿ ಯಾವ ಅಣೆಕಟ್ಟೂ ಇಲ್ಲದೆ ಸಲೀಸಾಗಿ ಸಾಗರಕ್ಕೆ ಸೇರಿದಂತೆ.

ಇನ್ನೊಬ್ಬ ಅಪ್ಸರೆ: ಲೇ ಲೇ ಲೇ ನಿಲ್ಲೆ, ನಿನಗಿಂತ ಚೆಲುವೆಯಾದ ಈ ಗುಲಾಬಿ ಅರಳಿ ಅದರ ಮಧ್ಯದಲ್ಲಿ ಮಧುವು ತುಂಬಿರುವೆ. ದುಂಬಿಯಂತಿರುವ ಮಧುರ ದೇಹ ಬಾಹುವು ಈ ಗುಲಾಬಿಯ ಮಧುರ ಮಧ್ಯಭಾಗದಲ್ಲಿ ಕುಳಿತು ಮಧುವನ್ನು ಕುಕ್ಕಿ ಹೀರಲಿ. ಇಬ್ಬರೂ ಅಪ್ಸರೆಯರು ಚಡಪಡಿಸುತ್ತಿದ್ದರು.

ಯಮ: ವಿಶ್ರಮಿಸಿ ಮುಂದೆ ಹೊರಡಲು ಸಿದ್ಧನಾದ.

ಅಪ್ಸರೆಯರು: ಏ ಏ ಸುಂದರ ಪುರುಷ, ನಿಲ್ಲಿ ನಿಲ್ಲಿ ಎಂದರು.

ಯಮ: ನಿಲ್ಲದೆ ಹೊರಟುಹೋದ.

ಅಪ್ಸರೆಯರು: ಸಪ್ಪೆ ಮೋರೆ ಹಾಕ್ಕೊಂಡು ಸಿಪ್ಪೆಯಂತಾದರು.

ಯಮ: ಬ್ರಹ್ಮನನ್ನು ನೋಡಲೆಂದು ಹೊರಟರೆ ತನ್ನ ವಾಹನ ಕೈಕೊಟ್ಟಿತು. ಮಾರ್ಗಧ್ಯಲ್ಲಿ ನಾರದರ ಕಾಟ ಜೊತೆಗೆ ಕಲಿಯುಗದ ಅಪ್ಸರೆಯರ ಶಾಪದ ಕಾಟ. ಓ ಬ್ರಹ್ಮ, ನಿನ್ನ ಸೃಷ್ಟಿ, ಕಲ್ಪನೆ ಏನೆಂದ್ಹೇಳಲಿ. ನರಕದ ಅಧಿಪತಿಯಾದ ನನಗೆ ಕಲಿಯುಗದ ಅಪ್ಸರೆಯರು

ಅಡ್ಡಿ ಬಾರದಂತೆ ಅನುಗ್ರಹಿಸು ಎಂದು ಬ್ರಹ್ಮನಲ್ಲಿ ಮೊರೆ ಹೊಕ್ಕಿದ. ಹಾಗೆ ಮುಂದೆ ಸಾಗುತ್ತಾ ನಮ್ಮ ನಾರದರು ಯಾವಾಗಲೂ ಪಾದಚಾರಿಯಾಗಿ ಸಂಚರಿಸುತ್ತಿರುತ್ತಾರೆ. ಇನ್ನು ಮುಂದೆ ನಾರದರು ಸಂಚರಿಸುವ ದಾರಿಯನ್ನು ನಿಷೇಧಿಸಬೇಕು. ನಾರದರಿಗೆ ಸುಗಮವಾಗಿ ಸಂಚರಿಸಲು ಅವರಿಗೆ ವಾಹನ ನೀಡುವಂತೆ ತ್ರಿಮೂರ್ತಿಗಳಲ್ಲಿ ಮನವಿ ಮಾಡ್ತೀನಿ ಎಂದು ಯಮರಾಜ ದಾರೀಲಿ ಒಬ್ಬನೇ ಮಾತನಾಡುತ್ತ ಬರುತ್ತಿದ್ದ. ನಮ್ಮ ಬ್ರಹ್ಮಪುತ್ರರಿಗೆ ಯಮಹ ದ್ವಿಚಕ್ರ ವಾಹನ ಕೊಟ್ಟರೆ? ಏ ಎಮ್ಮೆಯಂತಿರುವ ವಾಹನ ತರವಲ್ಲ. ಇನ್ನು ಟಿವಿಎಸ್ ವಾಹನ ನೀಡಿದರೆ, ಅದು ಕತ್ತೆಯಂತೋಡುತ್ತದೆ. ಅವರಿಗೆ ಯೋಗ್ಯವಲ್ಲ. ಮಾರುತಿ ಕಾರು ನೀಡಿದರೆ, ಕಲಿಯುಗದ ರಂಭೆಯರನ್ನು ಕಂಡು ಬ್ರಿಟಿಷರಂತಹ ದೌರ್ಜನ್ಯ ರಂಭೆಯರ ಮೇಲೆ ಮಾಡಿ ಡಬ್ಬದಂತಿರುವ ಕಾರು ಡಬ್ಬಕ್ಕೆ ಸೇರಬಹುದು. ಇದು ಅವರಿಗೆ ಸರಿಯಲ್ಲ. ಇನ್ನು ಆಟೋರಿಕ್ಷಾ ನೀಡೋಣವೆಂದರೆ ಈಗಾಗಲೇ ಆಟೋಗಳು ಪೊಲಿಸಿನವರ ಪುಸ್ತಕದಲ್ಲಿ ಅಪರಾಧಿ ಆಟೋಗಳೆಂದು ಹೆಸರಾಗಿವೆ. ನಾರದರಿಗೆ ಖಂಡಿತವಾಗಿಯೂ ಇದು ಒಪ್ಪುವುದಿಲ್ಲ. ಬಜಾಜ್ ಕೊಡೋಣವೆಂದರೆ ನಾರದರು ಒಪ್ಪುವುದಿಲ್ಲ. ಸೈಕಲ್ ನೀಡಿದರೆ ನಾರದರು ಸೈಕಲನ್ನು ಕಾಲನಿಂದ ತುಳಿಯಬೇಕು. ಮೊದಲೇ ಪೇಷೆಂಟ್ ಆಗಿದ್ದಾನೆ. ಸೈಕಲ್ ತುಳಿಯಲೂ ಆಗುವುದಿಲ್ಲ. ನಾರದ ಬಡ್ಡಿಹೈದ ನಡೆದೇ ಸಾಯ್ಲಿ ಎಂದು ತಮ್ಮ ಎಮ್ಮೆಕೋಣನನ್ನು ಹೈ ಹೈ ಅಂತ ತಮ್ಮ ಕಾಲಿಗೆ ಏಟು ಹಾಕಿಕೊಂಡ್ರು.

ನಾರದ: ನಾರಾಯಣ ನಾರಾಯಣ ಎಂದು ಬ್ರಹ್ಮಲೋಕದಲ್ಲಿ ಬ್ರಹ್ಮನ ಹತ್ತಿರ ಬಂದು ಪರಬ್ರಹ್ಮನೇ ಬ್ರಹ್ಮಪುತ್ರನ ಪ್ರಣಾಮಗಳು.

ಯಮ: ಓಂ ಬ್ರಹ್ಮದೇವಾಯ ನಮಃ. ಬ್ರಹ್ಮದೇವರಿಗೆ ನರಕಲೋಕದ ಅಧಿಪತಿಯಾದ ಯಮಧರ್ಮನ ಪ್ರಣಾಮಗಳು.

ಬ್ರಹ್ಮ: ಹ! ಹ! ಎಂದು ನಕ್ಕುಬಿಟ್ಟನು. ಜೊತೆಗೆ ನಾರದನೂ ಸಹ ನಕ್ಕುಬಿಟ್ಟನು

ಯಮ: ಬ್ರಹ್ಮದೇವನೆ ಏತಕ್ಕೆ ಹಾಸ್ಯವಾಗಿ ನಕ್ಕಿರಿ ಎಂದು ಪ್ರಶ್ನಿಸಿದನು.

ನಾರದ: ಅಲ್ಲಯ್ಯಾ ಯಮ, ನಗದೇ ಇನ್ನೇನು ಮಾಡ್ಬೇಕು?

ಯಮ: ಬ್ರಹ್ಮಪುತ್ರರೇ, ನೀವೂ ಹಾಸ್ಯ ಮಾಡುವಿರಾ?

ಬ್ರಹ್ಮ: ಯಮರಾಜ ನೀನು ಉಡುಗೆ-ತೊಡುಗೆಗಳಿಲ್ಲದೆ ಅರ್ಧ ಬೆತ್ತಲೆಯಾಗಿದ್ದಿ.

ಯಮ: ನಾರದ ಮುನಿಗಳೇ ನೀನು ನನ್ನನ್ನು ನಗ್ನವಾಗು ಎಂದು ಹರಸಿದ ಫಲ.

ನಾರದ: ಅಯ್ಯೋ ಯಮರಾಜ, ನಿನ್ನ ವಾಹನ ಎಲ್ಲಿ ಎಂದು ಕೇಳಿದರು.

ಯಮ: ನಾನು ಎಮ್ಮೆಯನ್ನು ಹಸಿರು ಹುಲ್ಲು ಮೇಯಲೆಂದು ಬಿಟ್ಟಿದ್ದೀನಿ ಎಂದು ಉತ್ತರಿಸಿದರು.

ಬ್ರಹ್ಮ: ಯಮಧರ್ಮ, ನಮ್ಮ ಲೋಕಕ್ಕೆ ಬಂದ ಕಾರಣ?

ಯಮ: ಬ್ರಹ್ಮದೇವ, ಯಾವೋನೋ ಪತ್ರಕರ್ತ ರಾಮಸಿಂಹಯ್ಯ ಬಂದು ನಮ್ಮನ್ನು ಕಾಡುಪಾಪನಂತೆ ಆಡಿಸುತ್ತಿದ್ದಾನೆ. ಅವನನ್ನು ಸಂಹರಿಸಲು ಆಗುತ್ತಿಲ್ಲ. ಅದಕ್ಕೆ ನಿಮ್ಮ ಮಾರ್ಗದರ್ಶನ ಪಡೆಯಲು ಬಂದೆ.

ಬ್ರಹ್ಮ: ಬ್ರಹ್ಮಕುಮಾರ, ನಿನ್ನ ಅಭಿಪ್ರಾಯವೇನು?

ನಾರದ: ಮಾಡಿದ್ದುಣ್ಣೋ ಮಾರಾಯ!

ಬ್ರಹ್ಮ: ನಾರದ ಏಕೆ ಹಾಗೆಂದೆ? (ಮುಂದುವರೆಯುವುದು)



# ಸ್ನೇಹ

ಗೆಳೆತನವೆಂಬುದು ಅತೀ ಸೂಕ್ಷ್ಮವಾದ, ಮೃದುವಾದ, ಅಪೂರ್ವವಾದ ಒಂದು ಒಳ್ಳೆಯ ಸಂಬಂಧ. ಅದು ಎಲ್ಲರಿಗೂ ಲಭಿಸುವುದಿಲ್ಲ. ಕಣ್ಣೀರು ಬಂದಾಗ ಒರೆಸುವವರು ಸ್ನೇಹಿತರಾದರೆ ಕಣ್ಣೀರು ಬರದಂತೆ ನೋಡಿಕೊಳ್ಳುವವರು ಅತ್ಯುತ್ತಮ ಸ್ನೇಹಿತರು. ಸ್ನೇಹಿತ ಪ್ರಪಂಚದಲ್ಲಿ ಯಾವುದೇ ವ್ಯಕ್ತಿ ತಂದೆ-ತಾಯಿಯಿಲ್ಲದೆ, ಅಣ್ಣ-ತಮ್ಮಂದಿರಿಲ್ಲದೆ, ಅಕ್ಕ-ತಂಗಿಯರ್ರಿಲ್ಲದೆ ಅಥವಾ ಬಂಧು ಬಳಗವಿಲ್ಲದೆ ಇರಬಹುದು. ಆದರೆ ಸ್ನೇಹಿತೆ ಅಥವಾ ಸ್ನೇಹಿತರಿಲ್ಲದೆ ಇರುವುದು ಅಸಾಧ್ಯವಾದ ಮಾತು. ಸ್ನೇಹಿತರ ಸ್ನೇಹದ ಆಳ ಸ್ನೇಹಿತರ ಕಷ್ಟ ಬಂದಾಗ ಮಾತ್ರ. ಸ್ನೇಹಿತರ ಕಷ್ಟದಲ್ಲಿ ಅವರನ್ನು ಸಾಂತ್ವನಗೊಳಿಸಿ ಆಧಾರವಾಗಿ ನಿಲ್ಲುವವರೇ ಉತ್ತಮವಾದ ಸ್ನೇಹಿತರು.

ನಿಜವಾದ ಸ್ನೇಹವೆಂಬುದು ಒಂದು ಮಾವಿನ ಮರದಂತೆ. ಹೀಗೆ ಅದು ದಣಿದವರಿಗೆ ನೆರಳು ಹಸಿದವರಿಗೆ ಹಣ್ಣು, ಆಟವಾಡಲು ಇಚ್ಛಿಸುವವರಿಗೆ ತನ್ನನ್ನೇ ಸಮರ್ಪಿಸಿ ಕೊಳ್ಳುತ್ತದೆಯೋ ಹಾಗೆ ಆಪ್ತ ಸ್ನೇಹಿತರು ತಮ್ಮ ಸಂತೋಷ ಹಂಚಿಕೊಳ್ಳುವುದಲ್ಲದೆ, ದುಃಖದಲ್ಲೂ ಭಾಗಿಗಳಾಗುತ್ತಾರೆ. ನಮ್ಮ ಗೆಲುವಿನಲ್ಲಿ ಅವರು ಹರ್ಷಿತರಾಗುತ್ತಾರೆ. ನಮ್ಮ ಸೋಲಿಗೆ ಅವರು ಸಂಕಟ ಪಡುತ್ತಾರೆ. ಯಶಸ್ಸಿಗೆ ದಾರಿದೀಪವಾಗುತ್ತಾರೆ. ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಯಾರಿಗೆ ಕಷ್ಟವೊದಗಿದರೂ ನಾವು ದುಃಖಿಸುತ್ತೇವೆ. ಅದಕ್ಕೆ ನಮ್ಮ ಮತ್ತು ಅವರ ನಡುವೆ ಇರುವ ರಕ್ತ ಸಂಬಂಧ ಕಾರಣವಾಗಬಹುದು. ಆದರೆ ಸ್ನೇಹಿತರ ಸಂಕಟಕ್ಕೆ ಸ್ಪಂದಿಸುವ ಹೃದಯ ಯಾವುದೇ ಸ್ವಾರ್ಥವಾಗಲಿ ಅಥವಾ ಸಂಬಂಧವಾಗಲಿ ಇರುವುದಿಲ್ಲ.

ನಿಜವಾದ ಸ್ನೇಹ ನಿಧಾನವಾಗಿ ಬೆಳೆದು, ಆಳವಾಗಿ ಬೇರೂರುವ ಗಿಡ ಎಂಬ ಹಿರಿಯರ ಮಾತು ಅಕ್ಷರಶಃ ನಿಜ. ಒಂದೆರಡು ದಿನಗಳಲ್ಲಿ ಬೆಳೆದ ಸ್ನೇಹ ಅಷ್ಟೇ ಬೇಗ ಮುರಿದು ಬೀಳಬಹುದು. ಅದು ನಿಸರ್ಗದಲ್ಲಿ ಆಗುವ ಬದಲಾವಣೆಗಳಂತೆ ಹಂತ ಹಂತವಾಗಿ ಬೆಳೆಯುತ್ತಾ ಹೋಗಬೇಕು. ಗೆಳೆತನದಲ್ಲಿ ಧನ್ಯವಾದ ಮತ್ತು ಕ್ಷಮೆ ಕೇಳಬಾರದು ಎನ್ನುತ್ತಾರೆ. ಆದರೆ ತಪ್ಪು ನಮ್ಮಿಂದ ಆದಾಗ ಅಹಂ ಅನ್ನು ಬಿಟ್ಟು ಸ್ನೇಹಿತರಲ್ಲಿ ಮುಕ್ತ ಮನಸ್ಸಿನಿಂದ ಕ್ಷಮೆ ಯಾಚಿಸಬೇಕು. ನಮ್ಮ ಪಶ್ಚಾತ್ತಾಪ ಅವರಿಗೆ ಅರಿವಾದಾಗ ನಮ್ಮ ಮೇಲಿನ ಅಭಿಮಾನ, ಗೆಳೆತನ ಹೆಚ್ಚುತ್ತದೆ.

ಎಲ್ಲರೂ ಆಪ್ತ ಗೆಳೆಯರಾಗುವುದಿಲ್ಲ. ಉತ್ತಮ ಮಿತ್ರರನ್ನು ಆಯ್ದುಕೊಳ್ಳುವುದು ಒಂದು ಕಲೆ. ನಿಜವಾದ ಮಿತ್ರರು ದೊರೆಯುವುದು ಪೂರ್ವಜನ್ಮದ ಸುಕೃತವೇ ಸರಿ. ಸುಳ್ಳು ಹೇಳುವ ಸ್ನೇಹಿತನಿಗಿಂತ ಸತ್ಯ ಹೇಳುವ ಶತ್ರುವೇ ಮೇಲು ಎಂಬ ಮಾತು ಸ್ನೇಹದಲ್ಲಿ ಸತ್ಯದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತದೆ. ಮಿತ್ರರ ನಡುವೆ ಸುಳ್ಳು ಸುಳಿಯಬಾರದು. ಸ್ನೇಹಿತರು ತಪ್ಪು ಹಾದಿ ಹಿಡಿದಾಗ ಅವರನ್ನು ತಿದ್ದುವ ಕರ್ತವ್ಯವಿದ್ದಂತೆ. ಕೆಲವೊಮ್ಮೆ ಕಟುನುಡಿಗಳ ಮೂಲಕ ಬುದ್ಧಿ ಹೇಳುವ ಹಕ್ಕು ಸಹ ಇರುತ್ತದೆ. ''ಸ್ನೇಹ ಬೆಳೆಸುವುದು ಸುಲಭ, ಉಳಿಸಿಕೊಳ್ಳುವುದು ಕಷ್ಟ''. ಈ ಮಾತು ಅಕ್ಷರಶಃ ಸತ್ಯ. ನಾನು ಕಡೆಯಲ್ಲಿ ಹೇಳಬಯಸುವುದೇನೆಂದರೆ ಈ ಲೇಖನ ದೂರವಾಗಿರುವ ಒಬ್ಬ ಸ್ನೇಹಿತನ ಮನ ಪರಿವರ್ತಿಸಿದರೆ ಸಾರ್ಥಕತೆ ಪಡೆದುಕೊಳ್ಳುತ್ತದೆ ಎಂಬುದು ನನ್ನ ಆಶಯ.

ಅಕ್ಷಯ ಎಂ.

ಜುಲೈ 2017 ತಿಂಗಳಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ, ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

1 ಅನುರಂಜನಿ, ಮದುರೈ
2 ಪಾರ್ವತಿ, ಮಂಗಳೂರು
3 ಸುಗಂಧಿತ, ತುಮಕೂರು
4 ಪ್ರೇಮಲೀಲಾ, ಶಿವಮೊಗ್ಗ
5 ಕಸ್ತೂರಿಕಾ, ಗುಲ್ಬರ್ಗಾ
6 ಸುಹಾಸಿನಿ, ಬೆಂಗಳೂರು
7 ದೀಪಾಂಜಲಿ. ಕೊಯಮತ್ತೂರು
8 ನಂದಿತಾ, ಮಡಿಕೇರಿ
9 ಪ್ರೇಮಲೀಲಾ, ಹೊಸಪೇಟೆ
10 ಮನೋಜ್ಞ, ಭದ್ರಾವತಿ
11 ಗಂಧವತಿ, ಕಾರವಾರ
12 ಸಿಂಧು, ರಾಯಚೂರು
13 ತೇಜಸ್ವಿನಿ, ಊಟಿ
14 ಔದಾರ್ಯ, ನೆಲಮಂಗಲ
15 ಸೌಂದರ್ಯ, ಬೆಂಗಳೂರು
16 ಇಚ್ಛಾದೇವಿ, ಚಿಕ್ಕಮಗಳೂರು
17 ಉತ್ಪಲಾ, ಬಳ್ಳಾರಿ
18 ಚಂದ್ರಪ್ರಭಾ, ಕೋಲಾರ
19 ಜ್ಞಾನಾಂಬಿಕಾ, ಶಿವಮೊಗ್ಗ
20 ಭ್ರಮರಾಂಬ, ಮೈಸೂರು
21 ಪ್ರದೀಪಿಕಾ, ಹುಬ್ಬಳ್ಳಿ
22 ವಿದ್ಯಾಧರಿ, ಧಾರವಾಡ
23 ಕುಮುದಾ, ಮಡಿಕೇರಿ
24 ಸರಸ್ವತಿ, ನಂಜನಗೂಡು
25 ಆರಾಧನಾ, ಶಿವಮೊಗ್ಗ
26 ಸ್ವರೂಪಿಣಿ, ಮೈಸೂರು
27 ಗಿರಿಜಾ, ಮಂಡ್ಯ
28 ನೀಲಾಮಣಿ, ಊಟಿ
29 ಪದ್ಮಿನಿ, ಹೊಸೂರು
30 ಚಾರುಮತಿ, ಧಾರವಾಡ
31 ಸಂಗೀತಾ, ಬೆಂಗಳೂರು

## ನಮ್ಮಮ್ಮನ ಮನೆ

ವಾಗ್ಯುದ್ಧದ ನಂತರ ಪತ್ನಿ ತನ್ನ ಸಾಮಾನುಗಳನ್ನು ಪ್ಯಾಕ್ ಮಾಡುತ್ತಿದ್ದಳು.

ಪತಿ: ಎಲ್ಲಿಗೆ ಹೊರಟಿರುವೆ?

ಪತ್ನಿ: ನಮ್ಮಮ್ಮನ ಮನೆಗೆ.

ಪತಿ: ಈತನೂ ಕೂಡ ತನ್ನ ಸಾಮಾನುಗಳನ್ನು ಪ್ಯಾಕ್ ಮಾಡತೊಡಗಿದನು.

ಪತ್ನಿ: ಈಗ ನೀವೆಲ್ಲಿಗೆ ಹೊರಟಿರುವಿರಿ?

ಪತಿ: ನಮ್ಮಮ್ಮನ ಮನೆಗೆ.

ಪತ್ನಿ: ಹಾಗಿದ್ದರೆ ಮಕ್ಕಳ ಕಥೆಯೇನು?

ಪತಿ: ನೀನು ನಿಮ್ಮಮ್ಮನಲ್ಲಿಗೆ ಮತ್ತು ನಾನು ನಮ್ಮಮ್ಮನಲ್ಲಿಗೆ ಹೊರಟಿರುವಾಗ... ನಿಯಮ ಪ್ರಕಾರ, ಅವರು ಅವರಮ್ಮನಲ್ಲಿಗೆ ಹೊರಡಬೇಕು ತಾನೆ?

ಪತ್ನಿ: ಮರುಮಾತನಾಡದೆ ತನ್ನ ಸಾಮಾನುಗಳನ್ನು ಯಥಾಸ್ಥಾನದಲ್ಲಿರಿಸಿದಳು.



## ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

**ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ**

## ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ

ಇತ್ತೀಚಿನ ದಿನಗಳಲ್ಲಿ ಅಯ್ಯಪ್ಪಸ್ವಾಮಿ ಕಾಲ ಬಂದರೆ ಕೊನೆಯಪಕ್ಷ 10 ಮಧುಮೇಹಿಗಳು ಕಾಲಿನಲ್ಲಿ ಗಾಯ ಮಾಡಿಕೊಂಡು ಬಂದಿರುತ್ತಾರೆ. ದಯವಿಟ್ಟು ಮಧುಮೇಹಿಗಳು ಅಯ್ಯಪ್ಪಸ್ವಾಮಿ ನೋಡಲು ಬರಿಗಾಲಿನಲ್ಲಿ ಹೋಗುವುದು, ಹರಕೆ ಕಟ್ಟಿಕೊಂಡು ಬರಿಗಾಲಿನಲ್ಲಿ ಬೆಟ್ಟ ಹತ್ತುವುದು ಇವೆಲ್ಲ ಮಾಡಬಾರದು. ಇದರಿಂದ ಹೆಚ್ಚಿನ ಅನಾಹುತವಾಗಿ ಕಾಲು ಕಳೆದುಕೊಳ್ಳುವ ಸಂಭವ ಹೆಚ್ಚಿಸುತ್ತದೆ.

**19. ಹಳ್ಳಿಗಾಡಿನಲ್ಲಿ ಗುಡ್ಡ (ಪೂಜೆ ಮಾಡುವವರು) ಬೆಟ್ಟ ಹತ್ತುವುದು ಬರಿಗಾಲಿನಲ್ಲಿ ನಡೆಯುವುದು ಹಾಗೂ ಕೊಂಡ ಹಾಯುವುದು.**

ಇಂದಿಗೂ ಹಳ್ಳಿಗಾಡಿನಲ್ಲಿ 2-3% ರೋಗಿಗಳು ಬರಿಗಾಲಿನಲ್ಲಿ ನಡೆಯುತ್ತಾರೆ. ವಿಶೇಷವಾಗಿ ದೇವಸ್ಥಾನದಲ್ಲಿ ಪೂಜೆ ಮಾಡುವವರು (ಗುಡ್ಡಗಳು) ಚಪ್ಪಲಿ ಹಾಕಿದರೆ ದೇವರಿಗೆ ದ್ರೋಹ ಮಾಡಿದಂತೆ ಎಂಬ ತಪ್ಪು ಕಲ್ಪನೆಯಲ್ಲಿ ಬರಿಗಾಲಿನಲ್ಲೇ ನಡೆಯುತ್ತಾರೆ. ಹಾಗೆಯೇ ಅನೇಕ ಮಧುಮೇಹಿಗಳು ಬರಿಗಾಲಿನಲ್ಲಿ ಕೊಂಡ ಹಾಯ್ದು ತಮ್ಮ ಹರಕೆ ತೀರಿಸುತ್ತಾರೆ. ಇಂಹ ಅನೇಕ ಘಟನೆಗಳನ್ನು ನಾನು ಆಗಿಂದಾಗ್ಗೆ ನೋಡುತ್ತಿರುತ್ತೇನೆ. ಇದು ರೋಗಿಗಳೇ ತಪ್ಪು ಕಲ್ಪನೆಯಿಂದ ಮಾಡಿಕೊಳ್ಳುವ ಅನಾಹುತಗಳು. ಆದುದರಿಂದ ರೋಗಿಗಳು ಸರಿಯಾದ ರೀತಿಯಲ್ಲಿ ಆಲೋಚಿಸಿ ವಿವೇಚನೆಯಿಂದ ಸೂಕ್ತವಾದ ನಡವಳಿಕೆಗಳನ್ನು ಅಳವಡಿಸಿಕೊಳ್ಳುವುದು ಬಹಳ ಉತ್ತಮ.

**20. ಸೂಕ್ತ ಪಾದರಕ್ಷೆಗಳನ್ನು ಧರಿಸದೇ ಸವೆದುಹೋದ ಪಾದರಕ್ಷೆಗಳನ್ನು ಧರಿಸುವುದು.**

80% ಮಧುಮೇಹಿಗಳು ಸೂಕ್ತ ಪಾದರಕ್ಷೆಗಳನ್ನು ಉಪಯೋಗಿಸದೆ ತೊಂದರೆಗಳಿಗೆ ಸಿಲುಕುತ್ತಾರೆ. ವಿದ್ಯಾವಂತರಾಗಲಿ, ಅವಿದ್ಯಾವಂತರಾಗಲಿ ಹೆಚ್ಚಿನ ಸಂದರ್ಭಗಳಲ್ಲಿ ಇರುವ (ಸವೆದುಹೋದ) ಪಾದರಕ್ಷೆಗಳನ್ನು ಅಥವಾ ಚರ್ಮದ ಚಪ್ಪಲಿಗಳನ್ನು ಅಥವಾ ಹೆಚ್ಚು ಒರಟಾಗಿರುವ ಚಪ್ಪಲಿಗಳು ಅಥವಾ ಪಾದಗಳಿಗೆ ಸೂಕ್ತವಲ್ಲದ ಪಾದರಕ್ಷೆಗಳನ್ನು ಉಪಯೋಗಿಸಿ ತೊಂದರೆಗಳಿಗೆ ಸಿಲುಕುತ್ತಾರೆ. ಆದುದರಿಂದ ಸ್ವಲ್ಪ ಹಣ ಖರ್ಚಾದರೂ, ನಿಮ್ಮ ವೈದ್ಯರ ಸಲಹೆ ಮೇರೆಗೆ ಸೂಕ್ತ ಪಾದರಕ್ಷೆಗಳನ್ನು ಧರಿಸಿ ಪಾದಗಳನ್ನು ಉತ್ತಮವಾಗಿ ಸಂರಕ್ಷಿಸಿಕೊಳ್ಳುವುದು ಬಹಳ ಮುಖ್ಯ. ಮಧುಮೇಹಿಗಳು ಚೆನ್ನಾಗಿ ನೆನಪಿಟ್ಟುಕೊಳ್ಳಬೇಕು.ಸ ಆಮಾನ್ಯವಾಗಿ 20% ಪಾದಗಳಿಗೆ ದುಷ್ಪರಿಣಾಮಗಳಾಗುವುದು.

*(ಮುಂದುವರಿಯುವುದು)*

# ಅನಸೂಯ ಯಾಗ

ಅನಸೂಯ ನಮ್ಮೆಲ್ಲರಿಗೂ ಚಿರಪರಿಚಿತ ಹೆಸರು. ಕರ್ದಮ ಮುನಿ ಮತ್ತು ದೇವಹೂತಿಯರ ಮಗಳು. ಮಿಗಿಲಾಗಿ ಅತ್ರಿ ಮಹಾಮುನಿಯ ಸತಿ. ಪಾವಿತ್ರ್ಯತೆಯ ಮತ್ತೊಂದು ಹೆಸರು ಅನಸೂಯ. ತನ್ನನ್ನು ಪರೀಕ್ಷಿಸಬಂದ ತ್ರಿಮೂರ್ತಿಗಳನ್ನೇ ಕಂದಗಳನ್ನಾಗಿಸಿ ತೂಗಿ, ಲಕ್ಷ್ಮಿ, ಸರಸ್ವತಿ, ಪಾರ್ವತಿಯರನ್ನು ಕಂಗಾಲುಗೊಳಿಸಿದಾಕೆ.

ಅಸೂಯೆ ಮಾನವನ ಅತ್ಯಂತ ಸಹಜ ಸ್ವಭಾವದಲ್ಲಿಯೇ ಅಡಗಿರುವ ಒಂದು ಗುಣ. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅರಿಷಡ್ವರ್ಗಗಳಲ್ಲಿ ಮಾತ್ಸರ್ಯ ಕೊನೆಯದಾದರೂ ಮಾನವನ ಮನಸ್ಸಿನಲ್ಲಿ ಅದು ಕೊನೆಯದೇನೂ ಅಲ್ಲ. ಅಸೂಯೆಯಿಂದ ಮುಕ್ತರಾದವರನ್ನು ಅನಸೂಯರು ಎನ್ನಬಹುದೇನೋ. ಹೀಗೆ ವಿಶ್ಲೇಷಣೆ ಮಾಡಿದರೆ ಈ ವಿಶ್ವದಲ್ಲಿ ಅನಸೂಯರು ಬೆರಳೆಣಿಕೆ ಸಿಗಬಹುದಷ್ಟೇ.

ಅಸೂಯೆ ಆದಿಕಾಲದಿಂದಲೂ ತನ್ನದೇ ವೈಭವವನ್ನು ಮೆರೆದುಕೊಂಡು ಬಂದಿದೆ. ರಾಮಾಯಣ, ಮಹಾಭಾರತಗಳಾದಿ ಪುರಾಣ ಪುಣ್ಯಕಥೆ ಮಹಾಕಾವ್ಯಗಳಲ್ಲಿಯೂ ಅಸೂಯೆಯ ಕೈವಾಡವನ್ನು ಕಾಣುತ್ತೇವೆ. ತನ್ನ ಸವತಿಯ ಮಗ ರಾಮ ಪಟ್ಟಾಭಿಷಿಕ್ತನಾಗುತ್ತಾನೆಂಬ ಅಸೂಯೆಯಿಂದ ಕೈಕೇಯಿ ದಶರಥನಲ್ಲಿ ಕೇಳಿಕೊಂಡ ವರಗಳ ಪ್ರಭಾವದಿಂದ ಇಡೀ ರಾಮಾಯಣ ನಡೆದುಹೋಯಿತು. ತನಗಿಂತ ಕಿರಿಯಳಾದ ತನ್ನ ಮೈದುನನ ಹೆಂಡತಿಯಾದ ಕುಂತಿ/ಮಾದ್ರಿಯರು ಮಕ್ಕಳ ತಾಯಿಯಾದರು ಎಂದು ಕೇಳಿ ಕರುಬಿದ ಗಾಂಧಾರಿ ತನ್ನ ಗಜಗರ್ಭದಿಂದ ಭ್ರೂಣವನ್ನೇ ಹೊರಗೆಡವಿ ತನಗೂ ಬೇಗ ಮಕ್ಕಳು ಬೇಕೆಂದು ಬಯಸಿ, ಅನೇಕ ಅನಾಹುತಗಳಿಗೆ ನಾಂದಿ ಹಾಡಿದ್ದು ಪುರಾಣೇತಿಹಾಸ.

ಅಸೂಯೆ ಒಂದು ಸಂಕೀರ್ಣ ಭಾವಸ್ಥಿತಿ. ಮನಶ್ಶಾಸ್ತ್ರದ ಪ್ರಕಾರ ಹೋಲಿಕೆ ಮಾಡುವುದರಿಂದ, ಕೀಳರಿಮೆ, ಅವಮಾನ, ನಿಷೇಧದ ಭಯದಿಂದ ಅಸೂಯೆ ಹುಟ್ಟುತ್ತದೆ.

ಚಾತುರ್ವಣಾಶ್ರಮ ಪದ್ಧತಿಯೂ ಅಸೂಯೆಯ ಭಾವಕ್ಕೆ ನೀರೆರೆಯುತ್ತಿರುವುದರಲ್ಲಿ ಸಂದೇಹವಿಲ್ಲ. ಆದರೆ ವೈಚಾರಿಕ ಪ್ರಜ್ಞೆ ಬೆಳೆದಂತೆಲ್ಲಾ ಇದು ಯಾವುದೋ ದುರುದ್ದೇಶದಿಂದ, ಸ್ವಾರ್ಥ ಸಾಧನೆಗೆ ನಿರ್ಣಯಿಸಲ್ಪಟ್ಟ/ಸೃಷ್ಟಿಸಲ್ಪಟ್ಟ ವಿಭಾಗಗಳು ಎಂದು ಅನಿಸತೊಡಗಿದಂತೆಯೇ ಕ್ರೋಧ, ಮಾತ್ಸರ್ಯಗಳು ಸಹಜವಾಗಿಯೇ ಜನ್ಮತಾಳಿದವು.

ಅಸೂಯೆಯು ಬುದ್ಧಿ ಬಂದ ಮೇಲೆ ಹುಟ್ಟಿಕೊಳ್ಳುವ ಭಾವವಲ್ಲ, ಎಳೆಕಂದನಲ್ಲೂ ತಾಯಿ ತನ್ನ ಕಡೆ ಗಮನ ಹರಿಸದೆ ಬೇರೆ ಕಡೆ ಮಗ್ನಳಾದರೆ, ಅತ್ತು ಕರೆದು ಚಂಡಿ ಹಿಡಿವ ಮನಸ್ಥಿತಿಯಿಂದಲೇ ಗುರುತಿಸಬಹುದು. ಮಕ್ಕಳಲ್ಲಿ ತಾಯ್ತಂದೆಯರು ತೋರುವ ತರತಮ ನೀತಿಯಿಂದ ಬಾಲ್ಯದಿಂದಲೇ ಕೆಲವೊಮ್ಮೆ ಅಸೂಯೆ ಬಲಿಯುವ ಸಾಧ್ಯತೆಯೂ ಇದೆ.



ನಕಾರಾತ್ಮಕವಾಗಿಯಷ್ಟೇ ನೋಡದೆ ಸಕಾರಾತ್ಮಕವಾಗಿಯೂ ಅಸೂಯೆಯ ಮತ್ತೊಂದು ಮುಖವನ್ನು ಗುರುತಿಸಬಹುದು. ಅದು ಪೊಸೆಸಿವ್‌ನೆಸ್ ತರುವ ಮಾತ್ಸರ್ಯ. ತಾನು ಪ್ರೀತಿಸಿದವರು ನನಗಿಂತ ಬೇರೆ ಯಾರನ್ನೋ ಹೆಚ್ಚು ಪ್ರೀತಿಸುತ್ತಾರೆಂದೋ ಅಥವಾ ಅವರ ಕಡೆ ಹೆಚ್ಚು ಗಮನ ಹರಿಸುತ್ತಾರೆಂದೋ ಉಂಟಾಗುವ ಚಡಪಡಿಕೆ ಹುಟ್ಟಿಸುವ ಹೊಟ್ಟೆಕಿಚ್ಚು ಕೆಲವೊಮ್ಮೆ ಪ್ರೀತಿಯ ತೀವ್ರತೆಯನ್ನು ತೋರಿದರೆ ಮತ್ತೆ ಕೆಲವೊಮ್ಮೆ ಬಾಂಧವ್ಯದ ಬಿರುಕಿಗೂ ಕಾರಣವಾಗುವುದುಂಟು.

ಇನ್ನಾದರೂ ಅಸೂಯೆಯ ಮೊಟ್ಟೆಯೊಡೆದು ಅನಸೂಯೆಯ ಮರಿ ಜನ್ಮತಾಳಲಿ... ಅನಸೂಯ ಯಾಗಕ್ಕೆ ನಾವೆಲ್ಲ ಸಿದ್ಧರಾದರೆ ಅತ್ತಿತ್ತ ನೋಡದೆ ಮಿಡುಕದೆ, ನಮ್ಮ ಪ್ರತಿ ಯಶಸ್ಸನ್ನು ನಾವೇ ಮುರಿದು ಯಶಸ್ಸಿನ ಹೊಸ ಮಾನದಂಡವನ್ನು ನಾವೇ ಗುರುತಿಸಿ ಸಾಧಿಸಬಲ್ಲ ಸುಸ್ಥಿತಿಗೆ ತಲುಪಬಲ್ಲೆವು.

ಡಾ. ಶುಭಶ್ರೀ ಪ್ರಸಾದ್

**ಟಿಎಂಸಿ ಎಂದರೇನು?**

ಇಬ್ಬರು ಗೆಳೆಯರು ಟಿಎಂಸಿ ಬಗ್ಗೆ ಚರ್ಚೆ ಮಾಡುತ್ತಿದ್ದರು.

ಮಹೇಶ: ನಿನಗೆ ಟಿಎಂಸಿ ಎಂದರೆ ಗೊತ್ತಾ?

ತಿಪ್ಪೇಶ: ಆವಾಗ ಗೊತ್ತಿತ್ತು. ಆದರೆ ಈಗ ಮರೆತುಹೋಗಿದೆ.

ಮಹೇಶ: ಅಯ್ಯೋ ನಿನ್ನ ಹಣೆಬರಹ.

ತಿಪ್ಪೇಶ: ಯಾಕೋ, ಏನಾಯ್ತು. ನೀನೇ ಹೇಳು ನೋಡೋಣ.

ಮಹೇಶ: ಟಿಎಂಸಿಯನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿದರೆ ತಮಿಳುನಾಡಿಗೆ ಮಾತ್ರ ಕಾವೇರಿ.

**ವಿವಾಹಿತ ಪುರುಷರಿಗೊಂದು ಸಲಹೆ**

ನಿಮಗೆ ನಿಮ್ಮ ಹಣ ಡಬ್ಬಲ್‌ಗೊಳಿಸಬೇಕೆಂದಿದ್ದರೆ ಬೆಳಿಗ್ಗೆ ಆಫೀಸಿಗೆ ಹೋಗುವಾಗ 1000 ರೂ. ಪತ್ನಿಯ ಬಳಿ ಕೊಟ್ಟು ಸಂಜೆ ಮನೆಗೆ ಬಂದು ಲೆಕ್ಕಕೇಳಿ.

ಆಗ 2000 ರೂಪಾಯಿನ ಲೆಕ್ಕ ಸಿಗುತ್ತದೆ...!

ತಿಮ್ಮ: ಐ ಲವ್ ಯು ಪದವನ್ನು ಕಂಡುಹಿಡಿದವರು ಯಾರು?

ಗುಂಡ: ಚೀನಾದವರು.

ತಿಮ್ಮ: ಚೀನಾದವರಾ? ಅದು ಹೇಗೆ?

ಗುಂಡ: ಆ ಪದಕ್ಕೆ ಗ್ಯಾರಂಟಿ ಇಲ್ಲ, ಅದಕ್ಕೆ.

ಸರ್ವರಿಗೂ ಪತ್ರಿಕಾ ದಿನಾಚರಣೆಯ ಶುಭಾಶಯಗಳು

# ಹುಲಗಾದ್ರಿ ಎಂಟರ್‌ಪ್ರೈಸಸ್

ನಮ್ಮಲ್ಲಿ ಎಲ್ಲಾ ಸಮಾರಂಭಗಳಿಗೆ ಬೇಕಾದ ಅಡುಗೆ
ಪಾತ್ರೆಗಳು, ಗ್ಯಾಸ್ ಸ್ಟೌವ್ ಹಾಗೂ ಜಮಖಾನಗಳು
ಬಾಡಿಗೆಗೆ ದೊರೆಯುತ್ತವೆ.

ಮಾಲೀಕರು:
**ಹೆಚ್.ವಿ. ಭಾಸ್ಕರ್**
**ನಂ. 859, 15ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು-4**
**ಮೊ.: 94489-78493 / 91416-60778**

ಸರ್ವರಿಗೂ ಪತ್ರಿಕಾ ದಿನಾಚರಣೆಯ ಶುಭಾಶಯಗಳು



Prop: **R. Sanjay**

# METRO TAILORS

No. 612, N.S. Road,
Mysore-24.
Ph: 95906-66566



RNI No. KARKAN/2015/71642
KA/SK/MYS/1091/2017-2019

ಪತ್ರಿಕಾ ದಿನಾಚರಣೆ ಪ್ರಯುಕ್ತ ಶುಭಾಶಯಗಳು

# ಶ್ರೀ ವಿಷ್ಣು ಏಜೆನ್ಸೀಸ್

(ಕರ್ನಾಟಕ ರಾಜ್ಯ ಫ್ರಾಂಚೈಸಿ)
ವಿತರಕರು : ಮೈಸೂರು

# ಆರೋಗ್ಯವೇ ಭಾಗ್ಯ

**ನಂ. 200, ಶಂಕರಮಠ ರಸ್ತೆ, ಮಂಗಳೂರು ಕೋಚಿಂಗ್ ಸೆಂಟರ್
ಪಕ್ಕ, ಕೆ.ಆರ್. ಮೊಹಲ್ಲಾ, ಮೈಸೂರು.**
**ಫೋನ್: 96206-98830, 98867-53641, 93796-64639**



ಪತ್ರಿಕಾ ದಿನಾಚರಣೆ ಪ್ರಯುಕ್ತ ಶುಭಾಶಯಗಳು

## ಕರ್ನಾಟಕ ಪ್ರೆಸ್ ಕೌನ್ಸಿಲ್ (ರಿ.)

**ನಂ. 1149, 'ಪ್ರಗತಿ', ರೈಲ್ವೆಸ್ಟೇಷನ್ ರಸ್ತೆ,
ಚಾಮರಾಜಪುರಂ, ಮೈಸೂರು**
**ಮೊ. 88803-34444**

Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, RNI No. KARKAN/2015/71642

ತೆರೆದ ಅಂಚೆ